# ಶಿಕ್ಷೆ ರಹಿತ!

## ಪ್ರವಾಸೋದ್ಯಮದಲ್ಲಿ ಲೈಂಗಿಕ ಶೋಷಣೆಯಿಂದ ಮಕ್ಕಳ ರಕ್ಷಣೆ

## ಭಾರತೀಯ ಸನ್ನಿವೇಶದಲ್ಲಿನ ಸವಾಲುಗಳು ಮತ್ತು ಅನಿವಾರ್ಯತೆಗಳು

**ಸಮೀಕರಣಗಳು, ಮಾರ್ಚ್ 2009**

ಮಾರ್ಚ್ 13, 2009ರಂದು ಪ್ರವಾಸೋದ್ಯಮದಲ್ಲಿ ಮಕ್ಕಳ ರಕ್ಷಣೆಯ ಕುರಿತಾಗಿ,ಐಟಿಬಿ ಬರ್ಲಿನ್‌ನಲ್ಲಿ ನಡೆದ ಯುಎನ್‌ಡಬ್ಲ್ಯೂ ಟಾಸ್ಕ್ ಫೋರ್ಸ್‌ನ 24ನೇ ಸಭೆಯಲ್ಲಿ ಮತ್ತು ಇಸಿಪಿಎಟಿ ಜರ್ಮನಿ ಮತ್ತು ಇಸಿಪಿಎಟಿ ನೆದರ್‌ಲ್ಯಾಂಡ್ ಮಾರ್ಚ್ 8-10ರವರೆಗೆ ಬರ್ಲಿನ್‌ನಲ್ಲಿ ಆಯೋಜಿಸಿದ್ದ, ಪ್ರವಾಸೋದ್ಯಮದಲ್ಲಿನ ಲೈಂಗಿಕ ಶೋಷಣೆಯಿಂದ ಮಕ್ಕಳ ರಕ್ಷಣೆ ಮತ್ತು ಪ್ರವಾಸೋದ್ಯಮ ವೃತ್ತಿ, ಎನ್‌ಜಿಒ ಮತ್ತು ಕಾನೂನು ಅನುಷ್ಠಾನದ ಕುರಿತಂತೆ ತಜ್ಞರ ಸಭೆಯಲ್ಲಿ ಮಂಡಿಸಲಾದ ಪ್ರಬಂಧ)

**ಬೆಳೆಯುತ್ತಿರುವ ಪ್ರವಾಸೋದ್ಯಮ, ಬೆಳೆಯುತ್ತಿರುವ ಆತಂಕ**

ವಿಶ್ವದ ಶೇ.19ರಷ್ಟು ಮಕ್ಕಳನ್ನು ಭಾರತವು ಹೊಂದಿದೆ.ದೇಶದ ಒಟ್ಟು ಜನಸಂಖ್ಯೆಯು ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚು, ಸುಮಾರು 440 ಮಿಲಿಯನ್ ಮಕ್ಕಳ ಜನಸಂಖ್ಯೆಯಾಗಿದೆ(18 ವರ್ಷಕ್ಕಿಂತ ಕೆಳಗಿನವರು). ಅಹಿಂಸಾ ಸಿದ್ಧಾಂತ, ಸಹಿಷ್ಣುತೆ, ಮತ್ತು ನೂತನ ಟ್ರಿಲಿಯನ್ ಡಾಲರ್ ಆರ್ಥಿಕತೆಯ ಘೋಷಣೆಗಳ ಹೊರತಾಗಿಯೂ, ವಿಶ್ವದಲ್ಲಿಯೇ ಭಾರತವು ಅತಿ ಹೆಚ್ಚು ಲೈಂಗಿಕ ಶೋಷಣೆಗೊಳಪಡುವ ಮಕ್ಕಳ ಸಂಖ್ಯೆಯನ್ನು ಹೊಂದಿದೆ. ಶಿಶು ಅತ್ಯಾಚಾರ ಮೇಲಿನ ರಾಷ್ಟ್ರೀಯ ಅಧ್ಯಯನ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ (ಎಂಡಬ್ಲ್ಯೂಸಿಡಿ)ದಿಂದ 2007ರಲ್ಲಿ ಯೋಜಿಸಲ್ಪಟ್ಟಿರುವ)ವು 12,446 ಮಕ್ಕಳ ಸಂಖ್ಯೆಯೊಂದಿಗೆ ಭಾರತದಲ್ಲಿ 13 ರಾಜ್ಯಗಳನ್ನು ಒಳಗೊಂಡಿದೆ. ಗಂಡು ಶಿಶುಗಳಿಗಿಂತ ಹೆಣ್ಣು ಮಕ್ಕಳು ಹೆಚ್ಚು ತೊಂದರೆಗೊಳಗಾಗುತ್ತಿದ್ದಾರೆ ಮತ್ತು ಶೇ.21ರಷ್ಟು ಮಕ್ಕಳು ತೀವ್ರ ಅತ್ಯಾಚಾರಕ್ಕೊಳಗಾಗಿದ್ದಾರೆ ಎಂಬುದಾಗಿ ಈ ವರದಿಯು ಸೂಚಿಸುತ್ತದೆ. ಕಾರ್ಯಪ್ರದೇಶದಲ್ಲಿನ ಮಕ್ಕಳು(ಶೇ 61ರಷ್ಟು ಲೈಂಗಿಕ ಅತ್ಯಾಚಾರದ ವರದಿ) ಮತ್ತು ಬೀದಿಯಲ್ಲಿ ವಾಸಿಸುವ ಮಕ್ಕಳು(ಶೇ.54)ಹೆಚ್ಚು ಲೈಂಗಿಕ ಅತ್ಯಾಚಾರದ ಘಾಸಿಗೊಳಗಾಗಿದ್ದಾರೆ.

ಭಾರತೀಯ ಸರಕಾರದ ಪ್ರವಾಸೋದ್ಯಮ ಸಚಿವಾಲಯ(ಎಂಒಟಿ)ವು ಸೂಚಿಸುವ ಅಂಕಿಅಂಶಗಳ ಪ್ರಕಾರ, ಭಾರತಕ್ಕೆ ಬರುವ ವಿದೇಶಿ ಪ್ರವಾಸಿಗರ ಸಂಖ್ಯೆಯು 1996ರಲ್ಲಿ 2.29 ಮಿಲಿಯನ್‌ನಷ್ಟಿದ್ದು, 2007ರಲ್ಲಿ ಅದು 5.08 ಮಿಲಿಯನ್‌ಗೆ ತಲುಪಿದೆ. ಪ್ರಾದೇಶಿಕ ಪ್ರವಾಸಿಗರ ಸಂಖ್ಯೆಯು 1996ರಲ್ಲಿ 140.12 ಮಿಲಿಯನ್‌ನಷ್ಟಿದ್ದು, 2007ರ ವೇಳೆಗೆ ಇದು 526.56 ಮಿಲಿಯನ್‌ಗೆ ಏರಿಕೆಗೊಂಡಿದೆ. ಪ್ರವಾಸೋದ್ಯಮ ಉದ್ಯಮವು ದೇಶದ ಒಟ್ಟು ಪ್ರಾದೇಶಿಕ ಉತ್ಪನ್ನಕ್ಕೆ (ಜಿಡಿಪಿ)ಶೇ.5.9ನಷ್ಟು ಕೊಡುಗೆಯನ್ನು ನೀಡಿದೆ. ಪ್ರವಾಸೋದ್ಯಮವು 38.6 ಮಿಲಿಯನ್ ಉದ್ಯೋಗ ಸೃಷ್ಟಿಸಿದ್ದು(ನೇರವಾಗಿ ಮತ್ತು ಪರೋಕ್ಷವಾಗಿ), ಇದರಿಂದ ಒಟ್ಟು ಉದ್ಯೋಗದಲ್ಲಿ ಇದರ ಕೊಡುಗೆಯು ಶೇ.8.2 ಆಗಿದೆ ಎಂಬುದಾಗಿ ಪ್ರವಾಸೋದ್ಯಮ ಸಚಿವಾಲಯದ ಭಾರತದ ರಾಷ್ಟ್ರೀಯ ಪ್ರವಾಸೋದ್ಯಮ ಉಪಗ್ರಹ ಲೆಕ್ಕಪತ್ರ ವರದಿ(2006)ರ ವರದಿಗಳು ತಿಳಿಸಿವೆ.

ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಪ್ರವಾಸೋದ್ಯಮ ನೀತಿಗಳು, ವಿಶೇಷ ಸವಲತ್ತುಗಳನ್ನು ಹೊಂದಿದ ಮೂಲಸೌಕರ್ಯದ ಹೆಚ್ಚಳ, ಸಂಪರ್ಕ ಮತ್ತು ಸಾರಿಗೆ, ಉನ್ನತ ಮಟ್ಟದ ವಸತಿ ಮತ್ತು ಸಾಧ್ಯವಾದಷ್ಟು ಪ್ರದೇಶಗಳನ್ನು ಪ್ರವಾಸಿ ತಾಣಗಳಾಗಿ ಪರಿವರ್ತಿಸುವ ಮಂತ್ರದೊಂದಿಗೆ ವ್ಯಾಪಕವಾದ


Equations

ಪ್ರವಾಸೋದ್ಯಮ ಪ್ರೋತ್ಸಾಹ ಮತ್ತು ಅಭಿವೃದ್ಧಿಯತ್ತ ದೃಷ್ಟಿ ಹಾಯಿಸುವ ಒಲವನ್ನು ತೋರುತ್ತಿವೆ. ಆದರೆ, ಅಭಿವೃದ್ಧಿ ಸಾಧನೆಯ ತನ್ಮಯತೆಯಲ್ಲಿ, ಪ್ರವಾಸೋದ್ಯಮದ ಅಗಾಧ ಋಣಾತ್ಮಕ ಪ್ರಭಾವಗಳು ಮತ್ತು ಅತ್ಯಂತ ಲಜ್ಜಾಸ್ಪದವಾದ ಮಕ್ಕಳ ಲೈಂಗಿಕ ಶೋಷಣೆಯು ಗಮನಕ್ಕೆ ಬಂದಿದ್ದು, ಲೈಂಗಿಕ ಪ್ರವಾಸೋದ್ಯಮವನ್ನು ನಿರ್ಬಂಧಿಸಿದರೆ, ಪ್ರವಾಸಿಗರ ಸಂಖ್ಯೆ ಮತ್ತು ಜಿಡಿಪಿ ಕೊಡುಗೆಯಲ್ಲಿ ಇಳಿಮುಖ ಉಂಟಾಗಬಹುದೆಂಬ ವಾಸ್ತವತೆಯಿಂದಾಗಿ ನೀತಿ ನಿರ್ಮಾಪಕರು ಇದನ್ನು ಅಂಗೀಕರಿಸುವಲ್ಲಿ ಅಡಚಣೆಯನ್ನು ಕಂಡರು.

ಮಕ್ಕಳ ಹಕ್ಕುಗಳ ಬಗ್ಗೆ ವಿಶೇಷವಾಗಿ ಕಾಳಜಿಯನ್ನು ಹೊಂದಿರುವ ಸಚಿವಾಲಯಗಳು ಮತ್ತು ಮಂಡಳಿಗಳು ಪ್ರವಾಸೋದ್ಯಮ ಮತ್ತು ಮಕ್ಕಳ ಶೋಷಣೆಯ ನಡುವಿನ ಸಂಬಂಧವನ್ನು ತಿಳಿದುಕೊಂಡಿದ್ದರೂ,ದುರಾದೃಷ್ಟವಶಾತ್ ಪ್ರವಾಸೋದ್ಯಮದಲ್ಲಿನ ಪಾಲುದಾರರು ಇದರ ಬಗ್ಗೆ ಯಾವುದೇ ಗಮನಹರಿಸದೆ, ಅದನ್ನು ನಿರಾಕರಿಸುತ್ತಿದ್ದಾರೆ ಮತ್ತು ಉದಾಸೀನತೆಯನ್ನು ತೋರುತ್ತಿದ್ದಾರೆ., ದೇಶದ ಅಪೆಕ್ಸ್ ಯೋಜನಾ ಮಂಡಳಿ ಭಾರತೀಯ ಯೋಜನಾ ಆಯೋಗದ ಹನ್ನೊಂದನೇ ಯೋಜನೆ ದಾಖಲೆಯು, ಪ್ರವಾಸೋದ್ಯಮದಲ್ಲಿ ಮಕ್ಕಳ ಶೋಷಣೆ, ಬಾಲ ಕಾರ್ಮಿಕರು, ಕಳ್ಳ ಸಾಗಾಣಿಕೆ ಮತ್ತು ಲೈಂಗಿಕ ಶೋಷಣೆ ಮುಂತಾದವುಗಳ ನೇರ ಕೊಡುಗೆಯಿರುವುದನ್ನು ದಾಖಲಿಸಿದೆ.

## ಮಿಥ್ಯಾಕಲ್ಪನೆಗಳ ವಿನಾಶ

ಭಾರತದಲ್ಲಿ ಮಕ್ಕಳ ಲೈಂಗಿಕ ಶೋಷಣೆಗೆ ಸಂಬಂಧಿಸಿದ ಪ್ರವಾಸೋದ್ಯಮವು ವಿರಳವಾಗಿ ನಡೆಯುವ ವಿದ್ಯಮಾನವಾಗಿದ್ದು, ಹೆಚ್ಚಾಗಿ ಗೋವಾ ಮತ್ತು ಕೇರಳಕ್ಕೆ ಸೀಮಿತವಾಗಿದೆ ಮತ್ತು ಕೇವಲ ಸಣ್ಣ ಗುಂಪುಗಳ ವಿದೇಶ ಪ್ರವಾಸಿಗರೊಂದಿಗೆ ಸಂಪರ್ಕವನ್ನು ಹೊಂದಿದೆ ಎಂಬ ಸುಳ್ಳು ನಂಬಿಕೆಯು ವ್ಯಾಪಕವಾಗಿದೆ. ಭಾರತದ ಇತರ ಭಾಗಗಳಲ್ಲಿ ಪ್ರವಾಸೋದ್ಯಮ ಮತ್ತು ಹತೋಟಿಯಿಲ್ಲದ ಮಕ್ಕಳ ಲೈಂಗಿಕ ಶೋಷಣೆ ನಡೆಯುತ್ತಿದ್ದು, ಇದು ಪ್ರಾದೇಶಿಕ ಮತ್ತು ವಿದೇಶಿ ಎರಡೂ ಪ್ರವಾಸಿಗರೊಂದಿಗೆ ಸಂಬಂಧವನ್ನು ಹೊಂದಿದೆ ಎಂಬ ಅಂಶಗಳನ್ನು ಕೆಲವು ವರ್ಷಗಳಲ್ಲಿ ನಡೆಸಲಾದ ಸರಣಿ ಅಧ್ಯಯನಗಳು ಎತ್ತಿ ತೋರಿಸಿವೆ. ಈ ಕೆಲವು ಅಧ್ಯಯನಗಳ ಸಮೀಕರಣಗಳು ಕೆಳಗೆ ನೀಡಲಾಗಿದೆ.

ರಾಷ್ಟ್ರೀಯ ಮಹಿಳಾ ಆಯೋಗ(ಎನ್‌ಸಿಡಬ್ಲ್ಯೂ)ದಿಂದ ಆಯೋಜಿಸಲ್ಪಟ್ಟ ಕರಾವಳಿ ಲೈಂಗಿಕ ಪ್ರವಾಸೋದ್ಯಮ ಮತ್ತು ಲೈಂಗಿಕತೆ ಅಧ್ಯಯನ ಸಮೀಕರಣಗಳು ಪುರಿ ಮತ್ತು ಒರಿಸ್ಸಾದಲ್ಲಿನ ಮಕ್ಕಳ ಲೈಂಗಿಕ ಶೋಷಣೆ ಮತ್ತು ವೇಶ್ಯಾವೃತ್ತಿ ವಿದ್ಯಮಾನಗಳನ್ನು ದೃಢಪಡಿಸಿವೆ.

ಅಂತಾರಾಷ್ಟ್ರೀಯ ಇಸಿಪಿಎಟಿಯಿಂದ ಯೋಜಿಸಲ್ಪಟ್ಟ ಭಾರತದಲ್ಲಿ ಶಿಶು ಲೈಂಗಿಕ ಪ್ರವಾಸೋದ್ಯಮದ ಸಾಂದರ್ಭಿಕ ವಿಶ್ಲೇಷಣೆ(2003 ಗೋವಾ ಮತ್ತು ಕೇರಳ) ಎಂಬ ಇನ್ನೊಂದು ಅಧ್ಯಯನವು ಲೈಂಗಿಕ ಪ್ರವಾಸೋದ್ಯಮ ಮತ್ತು ದುಡಿಮೆಯ ಉದ್ದೇಶಕ್ಕಾಗಿ ಮತ್ತು ಮಹಿಳೆ ಹಾಗೂ ಮಕ್ಕಳ ಸಾಗಾಣಿಕೆಯ ಪ್ರಮಾಣದಲ್ಲಿ ಮತ್ತು ವೇಶ್ಯಾವೃತ್ತಿಯಲ್ಲಿ ಹೆಚ್ಚಳ ಉಂಟಾಗಿರುವುದನ್ನು ವರದಿ ಮಾಡಿದೆ. ಲೈಂಗಿಕ ಕಾರ್ಯಗಳಿಗಾಗಿ ಮಕ್ಕಳನ್ನು ಒದಗಿಸಿಕೊಡಲು ಪ್ರವಾಸಿಗರಿಗೆ ಸಹಕರಿಸುವ ಸ್ಥಳೀಯ ಹೋಟೇಲ್ ಮತ್ತು ಲಾಡ್ಜ್, ಪ್ರವಾಸಿ ನಿರ್ವಾಹಕರು,ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುವ ಈ ಮೊದಲು ಲೈಂಗಿಕ ಕಿರುಕುಳಕ್ಕೆ ಬಲಿಯಾದ ಮಕ್ಕಳು, ಬೀಚ್ ಹುಡುಗರು, ಪೈಲೆಟ್‌ಗಳು ಅಥವಾ ಮೋಟಾರ್ ಸೈಕಲ್, ಟ್ಯಾಕ್ಸಿ ಡ್ರೈವರ್‌ಗಳು ಮತ್ತು ಗುಡಿಸಲು ಮಾಲೀಕರು ಮುಂತಾದ ಮಧ್ಯವರ್ತಿಗಳ ಸಹಾಯವನ್ನು ಶಿಶು ಲೈಂಗಿಕ ಪ್ರವಾಸೋದ್ಯಮವು ಹೊಂದಿದೆ ಎಂಬ ನಿಜಾಂಶವನ್ನು ಅಧ್ಯಯನವು ಬಹಿರಂಗಪಡಿಸಿದೆ.

ರಾಷ್ಟ್ರೀಯ ಮಾನವ ಹಕ್ಕು ಆಯೋಗ(ಎನ್‌ಎಚ್‌ಆರ್‌ಸಿ)ದಿಂದ ನಿಯೋಜಿಸಲ್ಪಟ್ಟ ಭಾರತದಲ್ಲಿ ಮಹಿಳಾ ಮತ್ತು ಮಕ್ಕಳ ಸಾಗಾಣಿಕೆ ಕುರಿತಂತೆ 2006ರಲ್ಲಿ ನಡೆಸಲಾದ ಅಧ್ಯಯನವು, ಪ್ರವಾಸಿ ತಾಣಗಳಲ್ಲಿ, ಕರಾವಳಿ ಪ್ರವಾಸೋದ್ಯಮದಲ್ಲಿ ಮತ್ತು ಕೇರಳ, ದೆಹಲಿ, ಆಗ್ರಾ-ಉತ್ತರ ಪ್ರದೇಶ, ಜೈಪುರ-ರಾಜಸ್ಥಾನ, ಒರಿಸ್ಸಾ, ಆಂಧ್ರಪ್ರದೇಶ ಮತ್ತು ಪಾಂಡಿಚೇರಿ ಮುಂತಾದ ಹೆಚ್ಚಿನ ಪ್ರವಾಸಿ ಪ್ರದೇಶಗಳಲ್ಲಿ ಶಿಶು ಲೈಂಗಿಕ ಪ್ರವಾಸೋದ್ಯಮವು ಹೆಚ್ಚುತ್ತಿರುವ ಬಗ್ಗೆ ಸಾಕ್ಷಿಯನ್ನು ಒದಗಿಸಿದೆ.ಶಿಶು ವ್ಯಭಿಚಾರವನ್ನು ಬಯಸುವವರಿಗೆ ಗೋವಾ ಮತ್ತು ಕೋವಲಂ ಬೀಚ್‌ಗಳು ಒಂದು ಉತ್ತಮ ತಾಣವಾಗಿ ಪರಿವರ್ತನೆಗೊಳ್ಳುತ್ತಿರುವ ಪ್ರವೃತ್ತಿಯೂ ಹೆಚ್ಚಾಗುತ್ತಿದೆ ಎಂಬುದಾಗಿ ಈ ಅಧ್ಯಯನದ ವರದಿಗಳು ಸೂಚಿಸಿವೆ.

2007ರಲ್ಲಿ ಸಂಸತ್ತಿನ ಕೆಳಮನೆ(ಲೋಕಸಭೆ) ಸದಸ್ಯರಿಂದ ಕೇಳಲ್ಪಟ್ಟ ಪ್ರಶ್ನೆಗೆ ಪ್ರತಿಕ್ರಯಿಸಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ರೇಣುಕಾ ಚೌಧರಿ, ಪ್ರವಾಸಿ ಪರಂಪರೆ ಮತ್ತು ಕರಾವಳಿ ಪ್ರವಾಸೋದ್ಯಮದ ಹೆಸರಲ್ಲಿ ಶಿಶು ಲೈಂಗಿಕ ಶೋಷಣೆಯು ಗಮನಾರ್ಹವಾಗಿ ವಿಸ್ತಾರಗೊಳ್ಳುತ್ತಿರುವುದು ರಾಷ್ಟ್ರೀಯ ಮಾನವ ಹಕ್ಕು ಆಯೋಗ(ಎನ್‌ಎಚ್‌ಆರ್‌ಸಿ) ಮತ್ತು ರಾಷ್ಟ್ರೀಯ ಮಹಿಳಾ ಆಯೋಗ(ಎನ್‌ಸಿಡಬ್ಲ್ಯೂ)ವು ನಡೆಸಿದ ಅಧ್ಯಯನದ ವರದಿಗಳಿಂದ ತಿಳಿದುಬಂದಿದೆ ಎಂಬುದಾಗಿ ಸೂಚಿಸಿದ್ದರು.

2006ರಲ್ಲಿ ಅತಿಥಿ ಸತ್ಕಾರ ಉದ್ಯಮ ಸಚಿವಾಲಯವು (ಕಾರ್ಮಿಕ ಸಚಿವಾಲಯದಿಂದ)ಬಾಲಕಾರ್ಮಿಕತ್ವವನ್ನು ನಿಷೇಧಿಸಿತ್ತು. ಇದು ಅತಿಥಿ ಸತ್ಕಾರ ಉದ್ಯಮದ ಮೇಲಿನ ಹೊಳಪನ್ನು ಮಂದವಾಗಿಸಿತು. ಯಾಕೆಂದರೆ, ಬಾಲ ಕಾರ್ಮಿಕ ಪಿಡುಗಿನ ಕಾರಣದಿಂದಾಗಿ ಈ ನಿಷೇಧವು ಪ್ರವಾಸೋದ್ಯಮ ದೃಷ್ಟಿಕೋನದಿಂದ ಅತಿಥಿ ಸತ್ಕಾರ ಉದ್ಯಮಕ್ಕೆ ಕಪ್ಪುಚುಕ್ಕೆ ಬಳಿಯಲ್ಪಟ್ಟಿತು.ಏನೇ ಆದರೂ, ಯಾವುದೇ ವ್ಯವಸ್ಥಿತ ಮತ್ತು ವಿವೇಚನೆಯಿಂದ ನಿಷೇಧವನ್ನು ಕಾರ್ಯರೂಪತರುವ ಪ್ರಯತ್ನವು ತೀರಾ ಕಡಿಮೆಯಾಗಿದ್ದು, ಕಾನೂನು ಪರಿಪಾಲನಾ ಅಧಿಕಾರಿಗಳು ಈ ಕುರಿತಾಗಿ ನಿರ್ಲ್ಯಕ್ಷವನ್ನು ಹೊಂದಿದ್ದು, ಇದು ಇನ್ನಷ್ಟು ಶಿಶು ಲೈಂಗಿಕ ಮತ್ತು ಶೋಷಣೆಗೆ ಹಾದಿಮಾಡಿಕೊಡುತ್ತಿದೆ.

ಪ್ರವಾಸೋದ್ಯಮವನ್ನೇ ನಂಬಿಕೊಂಡಿರುವ ಗೋವಾ ರಾಜ್ಯಕ್ಕೆ ಅನ್ವಯವಾಗುವ ಮತ್ತು ಗೋವಾ ರಾಜ್ಯದಿಂದ ರಚಿಸಲ್ಪಟ್ಟ ಗೋವಾ ಮಕ್ಕಳ ಕಾಯಿದೆ(2003) ಶಾಸನ ಚೌಕಟ್ಟಿನಲ್ಲಿನ ಒಂದು ಅತಿಮುಖ್ಯವಾದ ಘಟನೆಯಾಗಿದೆ. ಈ ಕಾಯಿದೆಯು ದೇಶದಲ್ಲಿ ಮೊದಲ ಬಾರಿಗೆ, ಮಕ್ಕಳ ಶೋಷಣೆಯಲ್ಲಿ ಪ್ರವಾಸೋದ್ಯಮದ ಭಾರೀ ಕೊಡುಗೆಯಿರುವುದನ್ನು ಕಂಡುಕೊಂಡಿತು. ಪರಿಣಾಮಕಾರಿಯಾಗಿರುವ ಶಾಸನವನ್ನು ಜಾರಿಗೆ ತರುವಂತೆ ಗೋವಾ ಮತ್ತು ರಾಜ್ಯದ ಹೊರಭಾಗಗಳಲ್ಲಿನ ಮಕ್ಕಳ ಹಕ್ಕು ಸಮೂಹದ ಅನೇಕ ವರ್ಷಗಳ ಪ್ರೋತ್ಸಾಹದ ಫಲವು ಇದಾಗಿತ್ತು. ಎಲ್ಲಾ ವರ್ಗಗಳನ್ನು ಗುರುತಿಸಿ ಪ್ರವಾಸೋದ್ಯಮದಲ್ಲಿ ಮಕ್ಕಳ ರಕ್ಷಣೆಯನ್ನು ನಿರ್ವಹಿಸುತ್ತದೆ ಮತ್ತು ವಿವಿಧ ಪಾಲುದಾರರಿಗೆ ನಿರ್ದಿಷ್ಟ ಹೊಣೆಯನ್ನು ನೀಡುತ್ತದೆ. ಶಾಸನ ರಚನೆಯ ಎರಡು ವರ್ಷದೊಳಗೆ , 2005ರಲ್ಲಿ ಇದನ್ನು ತಿದ್ದುಪಡಿ ಮಾಡಲಾಯಿತು. ವಿರೋಧವನ್ನು ಹೊಂದಿದ್ದ ಶಾಸನವನ್ನು ಜಾರಿಗೆ ತರುವಂತೆ ಗೋವಾ ಮತ್ತು ರಾಜ್ಯದ ಹೊರಭಾಗಗಳಲ್ಲಿನ ಮಕ್ಕಳ ಹಕ್ಕು ಸಮೂಹದ ಅನೇಕ ವರ್ಷಗಳ ಪ್ರೋತ್ಸಾಹದ ಫಲವು ಇದಾಗಿತ್ತು. ಎಲ್ಲಾ ವರ್ಗಗಳನ್ನು ಗುರುತಿಸಿ ಪ್ರವಾಸೋದ್ಯಮದಲ್ಲಿ ಮಕ್ಕಳ ರಕ್ಷಣೆಯನ್ನು ನಿರ್ವಹಿಸುತ್ತದೆ ಮತ್ತು ವಿವಿಧ ಪಾಲುದಾರರಿಗೆ ನಿರ್ದಿಷ್ಟ ಹೊಣೆಯನ್ನು ನೀಡುತ್ತದೆ. ಶಾಸನ ರಚನೆಯ ಎರಡು ವರ್ಷದೊಳಗೆ , 2005ರಲ್ಲಿ ಇದನ್ನು ತಿದ್ದುಪಡಿ ಮಾಡಲಾಯಿತು. ಸಾಕಷ್ಟು ತತ್ವಾಧಾರಗಳಿಲ್ಲದೆ ಮತ್ತು ಕಾಯಿದೆಯಿಂದ ಕೆಲವು ಪ್ರಮುಖ ಪರಿಚ್ಛೇದಗಳನ್ನು ಉಪೇಕ್ಷಿಸುವುದರೊಂದಿಗೆ, ಕಾರ್ಯಗತಗೊಳಿಸುವಲ್ಲಿ ತಿದ್ದುಪಡಿಯು ಕಾಲೋಚಿತತೆಯನ್ನು ದುರ್ಬಲಗೊಳಿಸಿತ್ತು.ಪರಿಚ್ಛೇದ 8(11) ಇವುಗಳಲ್ಲೊಂದಾಗಿದ್ದು, ಶಿಶು ಲೈಂಗಿಕ ಶೋಷಣೆಗೆ ಸಂಬಂಧಿಸಿದ ಪ್ರವಾಸೋದ್ಯಮದಲ್ಲಿನ ಅಪರಾಧಗಳು

ಸಿವಿಲ್ ಪ್ರಕ್ರಿಯೆ ಸಂಹಿತೆ ಪ್ರಕಾರ ಜಾಮೀನುರಹಿತ ಅಪರಾಧಗಳಾಗಿವೆ ಎಂಬುದನ್ನು ಸೂಚಿಸುತ್ತದೆ. ದುರಾದೃಷ್ಟವಶಾತ್, ಗೋವಾದಲ್ಲಿ ಪ್ರವಾಸಿಗರಿಂದ ಮಕ್ಕಳಿಗೆ ಲೈಂಗಿಕ ಶೋಷಣೆಯಾಗುವ ಸಂಬಂಧ ಈ ಕಾಯಿದೆಯು ವಾಸ್ತವವಾಗಿ ವಿಫಲವಾದುದಾಗಿದೆ. ಈ ಕಾಯಿದೆ ಜಾರಿಗೆ ಬಂದ ಆರು ವರ್ಷಗಳ ನಂತರ ಪ್ರವಾಸಿಗರಿಂದ ಮಕ್ಕಳ ಲೈಂಗಿಕ ಶೋಷಣೆಯ ಕುರಿತಂತೆ ಕೇವಲ ಏಳು ಪ್ರಕರಣಗಳು ಗೋವಾದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಗೊಳಪಟ್ಟಿದ್ದು, ಅವುಗಳಲ್ಲಿ ಕೇವಲ ಎರಡು ಅಪರಾಧಿಗಳನ್ನು ತಪ್ಪಿತಸ್ಥರೆಂದು ತೀರ್ಮಾನಿಸಲಾಗಿದೆ.

ಶಿಶು ಅತ್ಯಾಚಾರ ಮತ್ತು ಪ್ರವಾಸೋದ್ಯಮದ ನಡುವಿನ ಸಂಬಂಧಗಳ ಸಾಕ್ಷಿಯು ಸಂಪೂರ್ಣವಾಗಿ ಮೇಲೆ ಸೂಚಿಸಿರುವ ಉದಾಹರಣೆಗಳಾಗಿ ಸಾರ್ವಜನಿಕ ಸ್ವಾಮ್ಯಗಳಲ್ಲಿವೆ. ಎರಡು ಪ್ರಮುಖ ಪ್ರವಾಸೋದ್ಯಮ ಮಂಡಳಿಗಳಾದ ಪ್ರವಾಸೋದ್ಯಮ ಸಚಿವಾಲಯ ಮತ್ತು ರಾಜ್ಯ ಪ್ರವಾಸೋದ್ಯಮ ಇಲಾಖೆ ಹಾಗೂ ಉದ್ಯಮಗಳು ಶಿಶು ಲೈಂಗಿಕ ಅತ್ಯಾಚಾರದ ವಿರುದ್ಧ ಕೇವಲ ಕೆಲವೇ ಸಕ್ರಿಯ ಕ್ರಮಗಳನ್ನು ಕೈಗೊಂಡಿದೆ ಮತ್ತು ಸ್ಪಷ್ಟ ನಿಲುವನ್ನು ಹೊಂದಿದೆ ಎಂಬ ವಾಸ್ತವವು ಭಾರತೀಯ ಸನ್ನಿವೇಶದಲ್ಲಿ ನಿಜವಾಗಿಯೂ ದುರದೃಷ್ಟಕರವಾಗಿದೆ.

**ಅತ್ಯಾಚಾರ ಮತ್ತು ನಿರ್ಭೀತಿಯ ಸುದೀರ್ಘ ಇತಿಹಾಸ**

ಭಾರತದಲ್ಲಿ ಪ್ರವಾಸೋದ್ಯಮದಲ್ಲಿನ ಶಿಶು ಅತ್ಯಾಚಾರದ ಮೊದಲ ಪ್ರಕರಣವು (1991) ಫ್ರೆಡ್ಡಿ ಪೀಟ್ಸ್(ಪುರುಷ 76, ಮೂಲ ತಿಳಿದಿಲ್ಲ) ಮೇಲೆ ದಾಖಲಾಗಿತ್ತು. ಗೋವಾದಲ್ಲಿ ಪೀಟ್ಸ್‌ನಿಂದ ಕಾರ್ಯನಿರ್ವಹಿಸಲ್ಪಡುತ್ತಿರುವ ಅನಾಥಾಶ್ರಮದಲ್ಲಿ ಅನೇಕ ಹದಿಹರೆಯದ ಬಾಲಕರು ಲೈಂಗಿಕವಾಗಿ ಮತ್ತು ದೈಹಿಕವಾಗಿ ವರ್ಷಗಳ ಕಾಲ ಅತ್ಯಾಚಾರಕ್ಕೊಳಗಾಗಿದ್ದರು ಮತ್ತು ಶೋಷಿಸಲ್ಪಟ್ಟ ಹೆಚ್ಚಿನವರು ವಿದೇಶಿ ಪ್ರವಾಸಿಗರಾಗಿದ್ದರು. 1996ರಲ್ಲಿ ಪೀಟ್ಸ್‌ನ್ನು ದೋಷಿ ಎಂದು ತೀರ್ಮಾನಿಸಲಾಗಿತ್ತು. ಇದು ಅಸ್ತಿತ್ವದಲ್ಲಿರುವ ಸಂಘಟಿತ ವ್ಯವಸ್ಥೆಗೆ ಎಚ್ಚರಿಕೆಯಾಗಬೇಕಿತ್ತು, ಆದರೆ ಹಾಗಾಗಲಿಲ್ಲ ಯಾಕೆಂದರೆ ಅಧಿಕಾರಿಗಳು ಮತ್ತು ಉದ್ಯಮಗಳು ಇದರ ಬಗ್ಗೆ ನಿರ್ಲ್ಯಕ್ಷ ತಾಳಿದ್ದರು.

ಇದರ ಬೆನ್ನಲ್ಲೇ, ಫೆಬ್ರವರಿ 1999ರಲ್ಲಿ, ಗೋವಾದಲ್ಲಿ ನ್ಯಾಯಬಾಹಿರ ಮತ್ತು ಅನೈತಿಕ ಉದ್ದೇಶಕ್ಕಾಗಿ ಮತ್ತು ಅಸಹಜ ಲೈಂಗಿಕ ಅಪರಾಧಗಳನ್ನು ಮಾಡಿರುವ ಕಾರಣದಿಂದಾಗಿ 57 ವರ್ಷದ ಜರ್ಮನ್ ಪ್ರಜೆ ಬ್ರಿಂಕ್‌ಮನ್ ಹೆಲ್ಮಟ್‌ನನ್ನು ಭಾರತೀಯ ದಂಡ ಸಂಹಿತೆ ಪರಿಚ್ಛೇದ 373 ಮತ್ತು 377ರ ಅಡಿಯಲ್ಲಿ ಪಣಜಿಯ ಸಹಾಯಕ ವಿಭಾಗೀಯ ನ್ಯಾಯಾಧೀಶರು ತಪ್ಪಿತಸ್ಥ ಎಂಬ ತೀರ್ಪನ್ನು ನೀಡಿ ಆತನಿಗೆ ಆರು ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿದ್ದರು. ನಂತರ ಬ್ರಿಂಕ್‌ಮನ್ ಮೇಲ್ಮನವಿ ಸಲ್ಲಿಸಿದ್ದು, 1999 ಸೆಪ್ಟೆಂಬರ್‌ನಲ್ಲಿ ಹೆಚ್ಚುವರಿ ವಿಭಾಗೀಯ ನ್ಯಾಯಾಧೀಶರು ನಿರ್ದೋಷಿ ಎಂದು ಸಾಬೀತು ಮಾಡಿದ್ದರು. ಆತನ ಪಾಸ್‌ಪೋರ್ಟ್ ಗೋವಾ ಪೊಲೀಸ್ ಬಳಿಯಿದ್ದರೂ, ಮನವಿ ಅವಧಿಯೊಳಗೆಯೇ ಅಕ್ಟೋಬರ್ 1999ರಲ್ಲಿ ಆತನು ವಿದೇಶಕ್ಕೆ ತೆರಳಿದ್ದನು. ರಾಜ್ಯದಲ್ಲಿನ ನಾಗರಿಕ ಸಮಾಜ ಸಂಸ್ಥೆಗಳ ತೀವ್ರ ಒತ್ತಡದ ಪರಿಣಾಮವಾಗಿ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಯಿತು. ಆದರೆ, ಬ್ರಿಂಕ್‌ಮನ್ ಗೋವಾದಲ್ಲಿಲ್ಲ ಮತ್ತು ಆತನು ಜರ್ಮನಿಗೆ ತೆರಳಿದ್ದಾನೆ ಎಂಬ ಕಾರಣದಿಂದಾಗಿ ಈ ಮನವಿಯ ಪರಿಶೀಲನೆಯನ್ನು ನ್ಯಾಯಾಧೀಶರು ನಿರಾಕರಿಸಿದರು. ಈತನ ಕುರಿತಾಗಿಯೇ ಮತ್ತೊಂದು ಮೇಲ್ಮನವಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು ಆದರೆ, ಇದೇ ಕಾರಣದಿಂದ ಅದೂ ತಿರಸ್ಕರಿಸಲ್ಪಟ್ಟಿತು!

ಬಂದರು ಪ್ರಕರಣ ಎಂಬುದಾಗಿ ಹೆಸರುವಾಸಿಯಾಗಿದ್ದ ಮುಂಬಯಿ ಉಚ್ಛ ನ್ಯಾಯಾಲಯವು ಮಾರ್ಚ್ 2006ರಲ್ಲಿ ನೀಡಿದ ಪ್ರಮುಖ ತೀರ್ಪೊಂದರಲ್ಲಿ ಬ್ರಿಟಿಶ್ ಪ್ರಜೆಗಳಾದ 62 ವರ್ಷದ ಡುಂಕನ್ ಗ್ರಾಂಟ್ ಮತ್ತು 58 ವರ್ಷದ ಅಲ್ಲನ್ ವಾಟರ್ ಎಂಬ ಇಬ್ಬರು ಪುರುಷರಿಗೆ ಆರು ವರ್ಷಗಳ ಜೈಲು ಶಿಕ್ಷೆ

ಮತ್ತು  ಇಬ್ಬರಿಗೂ ತಲಾ 20000 ಪೌಂಡ್ ದಂಡವನ್ನು ವಿಧಿಸಿತ್ತು. ಬ್ರಿಟಷರಿಂದ ನಿರ್ವಹಿಸಲ್ಪಡುತ್ತಿರುವ ಬಂದರು ವಸತಿ ಗೃಹಗಳ ಆಡಳಿತ ಮಂಡಳಿಯು ಮಕ್ಕಳನ್ನು ದೈಹಿಕವಾಗಿ ಶೋಷಿಸುತ್ತಿದೆ ಮತ್ತು ಲೈಂಗಿಕವಾಗಿಯೂ ಅತ್ಯಾಚಾರ ಎಸಗಿರುವ ಸಾಧ್ಯತೆಗಳಿವೆ ಎಂಬುದಾಗಿ 2001ರ ಪ್ರಾರಂಭದಲ್ಲಿ ನ್ಯಾಯಾಲಯದಿಂದ ನಿಯೋಜಿಸಲ್ಪಟ್ಟ ತಂಡವು ಸೂಚಿಸಿತ್ತು. ಬಾಲಕರ ಸಹಿ ಹೊಂದಿದ ಹೇಳಿಕೆಗಳು ಮತ್ತು ವೀಡಿಯೋ ಸಂದರ್ಶನಗಳ ಆಧಾರದಲ್ಲಿ ಚೈಲ್ಡ್‌ಲೈನ್ ಇಂಡಿಯಾವು ಪೊಲೀಸರಿಗೆ ದೂರು ಸಲ್ಲಿಸಿದಾಗ, ಗ್ರಾಂಟ್ ಮತ್ತು ವಾಟರ್ ಇಬ್ಬರೂ ಪಲಾಯನ ಮಾಡಿಯಾಗಿತ್ತು.  ಎನ್‌ಜಿಒಗಳ ತೀವ್ರ ಒತ್ತಡವು ಇಂಟರ್‌ಪಾಲ್‌ನ್ನು ವಾಟರ್ ಮತ್ತು ಗ್ರಾಂಟ್ಸ್‌ನ ವಿರುದ್ಧ ಕ್ರಮಕೈಗೊಳ್ಳುವಂತೆ ಮಾಡಿತ್ತು. ವಾಟರ್‌ನನ್ನು 2004ರಲ್ಲಿ ಅಮೆರಿಕದಲ್ಲಿ ವಶಪಡಿಸಿಕೊಂಡು ನಂತರ ಮುಂಬೈಗೆ ಹಸ್ತಾಂತರಿಸಲಾಯಿತು. ಗ್ರಾಂಟ್‌ನನ್ನು ತನ್ಜಾನಿಯಾದಲ್ಲಿ ಪತ್ತೆಹಚ್ಚಲಾಯಿತು. ಆತ ಅಲ್ಲಿ ಇನ್ನೊಂದು ಮಕ್ಕಳ ಅನಾಥಾಶ್ರಮವನ್ನು ಪ್ರಾರಂಭಿಸಲು ಸಿದ್ಧತೆ ನಡೆಸುತ್ತಿದ್ದ. ನಂತರ ಆತ ಜೂನ್ 2005ರಂದು ಮುಂಬೈ ಪೊಲೀಸರಿಗೆ ಶರಣಾದ. ಜುಲೈ 2006ರರ ಮನವಿಯ ಆಧಾರದಲ್ಲಿ ಉಚ್ಚ ನ್ಯಾಯಾಲಯವು ಅಪರಾಧಿಯನ್ನು ದೋಷವಿಮುಕ್ತಿಗೊಳಿಸಿ, ಏಳು ವರ್ಷಗಳ ಕಾಲ ನಡೆದ ವಿಚಾರಣೆಯ ಮಹತ್ತರ ತೀರ್ಪನ್ನು ಬುಡಮೇಲು ಮಾಡಿತು ಮತ್ತು ರದ್ದುಗೊಳಿಸಿತು!ಚೈಲ್ಡ್‌ಲೈನ್ ಈಗ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದೆ.

2003ರಲ್ಲಿ, ಬಹುರಾಷ್ಟ್ರೀಯ ಕಂಪನಿಯೊಂದರ ಪ್ರಧಾನ ನಿರ್ವಹಣಾ ಅಧಿಕಾರಿ ಎಂದು ಹೇಳಿಕೊಳ್ಳುತ್ತಿದ್ದ 61 ವರ್ಷದ ವಿಲಿಯಂ ಮಾರ್ಟಿ ಮತ್ತು 58 ವರ್ಷದ ಲೋಶ್ಚರ್ ಮಾರ್ಟಿ ದಂಪತಿಗಳ ಮೇಲೆ ಶಿಶುಕಾಮ ಸಂಬಂಧಿ ಅಪರಾಧಕ್ಕಾಗಿ ಆಪಾದನೆ ಹೊರಿಸಲಾಗಿತ್ತು ಮತ್ತು ಏಳು ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಲಾಗಿತ್ತು ಆದರೆ, ಲಂಚ ಕೊಡುವ ಸಂದರ್ಭವು ಅವನ ಬಿಡುಗಡೆಯನ್ನು ಸುಗಮವಾಗಿಸಿತು.

ಭಾರತೀಯ ದಂಡ ಸಂಹಿತೆ(ಐಪಿಸಿ) ಪರಿಚ್ಛೇದ 373 ಮತ್ತು 377ರ ಅಡಿಯಲ್ಲಿ ಆಸ್ಟ್ರೇಲಿಯನ್ ಪ್ರಜೆ 54 ವರ್ಷದ ವಲ್ಫ್ ವರ್ನರ್ ಇಂಗೋವನ್ನು ಪಣಜಿಯ ಸಹಾಯಕ ವಿಭಾಗೀಯ ನ್ಯಾಯಾಧೀಶರ ಅಪರಾಧಿ ಎಂಬುದಾಗಿ ತೀರ್ಪು ನೀಡಿದ್ದರು. ಆತನು ಭಾರತದಿಂದ ಆಸ್ಟ್ರೇಲಿಯಾಗೆ ಪಲಾಯನಮಾಡಿದ್ದನು. 2005ರಲ್ಲಿ, ಫ್ರೆಡ್ಡಿ ಪ್ರೀಟ್‌ನ ಶಿಶುಕಾಮಿ ಜಾಲದಲ್ಲಿ ಪಾಲ್ಗೊಂಡಿರುವುದರ ಆರೋಪದಲ್ಲಿ ಆಸ್ಟ್ರೇಲಿಯ ಫೆಡರಲ್ ಸರಕಾರವು ಈತನನ್ನು ಭಾರತಕ್ಕೆ ಹಸ್ತಾಂತರಿಸಿತು. 2006ರ ಆಗಸ್ಟ್ 4ರಂದು ಈತನನ್ನು ದೆಹಲಿ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿತ್ತು. ವಲ್ಫ್ ವರ್ನರ್ ಇಂಗೋ ವಿರುದ್ಧದ ಪ್ರಕರಣವು  ಇನ್ನೂ ಗೋವಾ ನ್ಯಾಯಾಲಯದ ಹೆಚ್ಚುವರಿ ವಿಭಾಗೀಯ ನ್ಯಾಯಾಧೀಶರ ಮುಂದೆ ವಿಚಾರಣೆಗೊಳ್ಳುತ್ತಿದೆ.

1990ರ ಪ್ರಾರಂಭದಲ್ಲಿ ಫ್ರೆಡ್ಡೀ ಪೀಟ್ಸ್‌ನೊಂದಿಗೆ ಶಿಶು ಅತ್ಯಾಚಾರ ವ್ಯವಹಾರವನ್ನು ನಡೆಸುತ್ತಿದ್ದ  ಫ್ರೆಂಚ್ ಪ್ರಜೆ ಡಾಮಿನಿಕ್ ಸೇಬ್ಯೆರ್‌ನ್ನು ದೆಹಲಿ ಕೇಂದ್ರ ತನಿಖಾ ದಳ(ಸಿಬಿಐ)ವು ಬಂಧಿಸಿತ್ತು, ಆದರೆ, ಈತನೂ ಭಾರತದಿಂದ ಪಲಾಯನಗೊಂಡಿದ್ದ.

ಮೇ 2008ರ ಇನ್ನೊಂದು ಪ್ರಕರಣದಲ್ಲಿ, ಗಂಡು ಮಕ್ಕಳೊಂದಿಗೆ ಅಸಹಜ ಲೈಂಗಿಕ ಕ್ರಿಯೆ ನಡೆಸುತ್ತಿದ್ದ ಆಸ್ಟ್ರೇಲಿಯನ್ ಪ್ರಜೆ ಮೈಕಲ್ ಕಾರ್ಬೆಟ್ ಜೋಸೆಫ್‌ನನ್ನು ಕೇರಳಾ ಕೋವಲಂ ಪೊಲೀಸರು ಬಂಧಿಸಿದ್ದರು. ಆದರೆ, 2008ರಲ್ಲಿ ನಿರೀಕ್ಷಣಾ ಜಾಮೀನು ಪಡೆದುಕೊಂಡು ಮೈಕಲ್ ಆಸ್ಟ್ರೇಲಿಯಾಗೆ ತೆರಳಿದ್ದನು ಮತ್ತು ಮೈಕಲ್‌ನ ತಾಯಿಯು ಅಸೌಖ್ಯಳಾಗಿರುವ ಕಾರಣದಿಂದ ತ್ರಿವೆಂಡ್ರಮ್ ವಿಭಾಗೀಯ ನ್ಯಾಯಾಲಯವು ,ಮೂರು ತಿಂಗಳಲ್ಲಿ ಹಿಂತಿರುಗಬೇಕೆನ್ನುವ ಶರತ್ತಿನೊಂದಿಗೆ  ಆತನ ಪಾಸ್‌ಪೋರ್ಟ್‌ನ್ನು ವಿಮುಕ್ತಗೊಳಿಸಿತ್ತು.ತನ್ನ ತಾಯಿಗೆ ಅಪಘಾತವಾಗಿದೆ ಮತ್ತು ಆ ಕಾರಣದಿಂದ ತನಗೆ ಮೂರು ತಿಂಗಳ ಜಾಮೀನು ದೊರಕಿತ್ತು  ಎಂಬುದಾಗಿ ಫ್ಯಾಕ್ಸ್ ಮಾಡಿರುವ ದಾಖಲೆಯನ್ನು ಕಾರ್ಬೆಟ್ ಸಲ್ಲಿಸಿದ್ದನು. ಆತನಿಗೆ

ಮರಳಬೇಕಾಗಿರುವ ವಾಯಿದೆಯ ಅವಧಿ ಮುಗಿದು ಸಮಯವೇ ಕಳೆದುಹೋಗಿದ್ದರೂ, ಕಾರ್ಬೆಟ್ ಅಥವಾ ಆತನ ಹೊಣೆಗಾರರ ವಿರುದ್ಧ ನ್ಯಾಯಾಲಯವು ಇನ್ನೂ ವಾರಂಟ್ ಜಾರಿಮಾಡಿಲ್ಲ.

ಸ್ವಿಸ್ ಪ್ರವಾಸಿ ದಂಪತಿಗಳಿಂದ ಪಡೆದುಕೊಂಡ ಸುಳಿವಿನ ಆಧಾರದಲ್ಲಿ ಸಮೀಕರಣ ತಂಡ, ಕೇರಳ ಮಹಿಳಾ ಸಾಮಖ್ಯ ಸಂಘ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ವರದಿಗಾರರು ಅಕ್ಟೋಬರ್ 2008ರಲ್ಲಿ ಕೋವಲಂ ಮತ್ತು ಕೇರಳದಲ್ಲಿ ಅಧ್ಯಯನ ನಡೆಸಿದ್ದರು.82 ವರ್ಷದ ಸ್ವಿಸ್ ಮಹಿಳೆ ಜಾರೋಬ್ ಸ್ವಾಲ್ಪಿನಿಂದ ಕಳೆದ 15 ವರ್ಷಗಳಲ್ಲಿ ಬಡಕುಟುಂಬದ ಸುಮಾರು 20 ಯುವಕರು ಅತ್ಯಾಚಾರಕ್ಕೊಳಪಟ್ಟಿದ್ದಾರೆ ಎಂಬುದನ್ನು ಈ ಅಧ್ಯಯನದ ವರದಿಗಳು ಬಹಿರಂಗಪಡಿಸಿವೆ.ಅವರ ಕುಟುಂಬಗಳಿಗೆ ಹಣ ಹಾಗೂ ಮೋಟಾರ್ ಬೈಕ್ ಮುಂತಾದ ಉಡುಗೊರೆಗಳನ್ನು ನೀಡುವುದರ ಮೂಲಕ ಅಲ್ಲದೆ ಅವರ ಮನೆ ನಿರ್ಮಾಣಕ್ಕೆ ಹಣಕಾಸು ಸಹಾಯವನ್ನು ನೀಡುವುದರ ಮೂಲಕ ಸ್ವಾಲ್ಪಿ ಈ ವಿಚಾರ ಬಹಿರಂಗವಾಗದಂತೆ ನೋಡಿಕೊಂಡಿದ್ದಳು.

ಸಮೀಕರಣ ಆಧಾರದ ಭರವಸೆಯೊಂದಿಗೆ ಮತ್ತು ನಮ್ಮ ಪಂಗಡಗಳ ಒತ್ತಾಯದೊಂದಿಗೆ, ಮೂರು ಅಪ್ರಾಪ್ತ ಬಾಲಕರು ಮತ್ತು ಒಬ್ಬ ಯುವಕ(ಈಗ 21 ವರ್ಷ ಆದರೆ ಕಳೆದ ಐದು ವರ್ಷಗಳಲ್ಲಿ ಸ್ವಾಲ್ಪಿಯಿಂದ ಅತ್ಯಾಚಾರಕ್ಕೊಳಗಾಗಿದ್ದನು) ರಿಂದ ದೀರ್ಘಾವಧಿಯ ಲೈಂಗಿಕ ಅತ್ಯಾಚಾರ ದೂರು ದಾಖಲು ಮಾಡಲಾಯಿತು. ಸಮೀಕರಣ ಮತ್ತು ಮಹಿಳಾ ಸಾಮಖ್ಯವೂ ದೂರು ದಾಖಲಿಸಿತು. ಭಾರತೀಯ ದಂಡ ಸಂಹಿತೆಯ ಪರಿಚ್ಛೇದ 377ರ ಅಡಿಯಲ್ಲಿ ದೂರು ದಾಖಲಾಗಿದ್ದು, ಬಾಲಕರ ಹೇಳಿಕೆಗಳನ್ನು ದಾಖಲಿಸಿಕೊಂಡ ನಂತರ ಪೊಲೀಸರು ಸ್ವಾಲ್ಪಿಯ ಪಾಸ್‌ಪೋರ್ಟ್‌ನ್ನು ಸ್ವಾಧೀನಪಡಿಸಿಕೊಂಡಿದ್ದರು. ಸ್ವಾಲ್ಪಿ ಶ್ರೀಲಂಕಾದಲ್ಲಿಯೂ ಅನೇಕ ಬಾಲಕರ ಮೇಲೆ ಅತ್ಯಾಚಾರಗೈದಿದ್ದಳು ಎಂಬುದಾಗಿ ಶ್ರೀಲಂಕಾದ ಇಸಿಪಿಎಟ್ ಸದಸ್ಯ ಪೀಸ್‌ನಿಂದ ದೃಢಪಟ್ಟಿತು. ದೂರು ದಾಖಲಾದ ಮೂರು ದಿನದಲ್ಲೇ ಮೂರು ಅಪ್ರಾಪ್ತ ಬಾಲಕರು ದೂರನ್ನು ಹಿಂದಕ್ಕೆ ಪಡೆದಕೊಂಡರು ಆದರೆ, 21 ವರ್ಷದ ಯುವಕ ಮಾತ್ರ ದೃಢವಾಗಿದ್ದನು. ಬಲಿಪಶುಗಳ ಪರೀಕ್ಷೆಗಾಗಿ ಆದೇಶ ನೀಡಲು ನ್ಯಾಯಾಲಯಕ್ಕೆ ಎರಡು ವಾರಗಳೇ ಬೇಕಾಯಿತು.

ಜಾಮೀನುರಹಿತ ಅಪರಾಧವಾಗಿ ದೂರನ್ನು ಪರಿಚ್ಛೇದ 377ರ ಅಡಿಯಲ್ಲಿ ದಾಖಲಿಸಿದ್ದರೂ, ನಿರೀಕ್ಷಣಾ ಜಾಮೀನಿಗಾಗಿ ಸ್ವಾಲ್ಪಿ ವಿಭಾಗೀಯ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದಳು. ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಅಂಶಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಸಹಕರಿಸಬೇಕಾಗಿದ್ದ ಫಿರ್ಯಾದಿಗಳು ವಾಸ್ತವನ್ನು ಬೆನ್ನಟ್ಟುವಲ್ಲಿ ಮತ್ತು ಅಪರಾಧಿಯ ಹೆಸರನ್ನು ಆರೋಪ ಪಟ್ಟಿಯಲ್ಲಿ ದಾಖಲಿಸುವಲ್ಲಿ ಆಸಕ್ತಿಯನ್ನು ಹೊಂದಿದ್ದಂತಿಲ್ಲ. ಬಹುಷಃ ಸ್ವಾಲ್ಪಿಯ ನಿರೀಕ್ಷಣಾ ಜಾಮೀನಿನ ಬಗ್ಗೆ ಹೆಚ್ಚು ಸಹಾನುಭೂತಿ ಮತ್ತು ನ್ಯಾಯಾಲಯದಲ್ಲಿ ಅದರ ಬಗ್ಗೆಯೇ ಆಸಕ್ತಿ ತೋರಿದಂತಿತ್ತು.

ದೂರು ದಾಖಲಾದ ತಿಂಗಳೊಳಗೆ, ಸ್ವಾಲ್ಪಿಗೆ ಮತ್ತೊಮ್ಮೆ ಜಾಮೀನು ದೊರಕಿತು ಮತ್ತು ತನ್ನ ವೀಸಾ ಅವಧಿ ಮುಗಿದಿದೆ ಎಂಬ ಕಾರಣದಿಂದ ದೇಶ ತೊರೆದಳು.(ಜಾಮೀನು ಪಡೆದುಕೊಳ್ಳಲು ತನ್ನ ಮೀರಿದ ವಯಸ್ಸು, ಕ್ಷೀಣಗೊಂಡ ಆರೋಗ್ಯ ಮತ್ತು ತಾನು ಸೇವಾ ಚಟುವಟಿಕೆಗಳಲ್ಲಿ ತೊಡಗಿರುವ ವಾಸ್ತವವನ್ನು ಸೂಚಿಸಿದ್ದಳು!ಆದರೂ ಇವೆಲ್ಲವು ಆಕೆಯನ್ನು ಮಕ್ಕಳ ಅತ್ಯಾಚಾರ ನಡೆಸುವುದಕ್ಕೆ ತಡೆಯೊಡ್ಡಿರಲಿಲ್ಲ!!) ಭಾರತೀಯ ಕಾನೂನಿಗಳಿಗಿಂತ ಸ್ವಿಸ್ ಕಾನೂನು ತುಂಬಾ ಕಟ್ಟುನಿಟ್ಟಾಗಿರುವ ಕಾರಣದಿಂದಾಗಿ ಇತ್ತೀಚೆಗೆ ಸ್ವಾಲ್ಪಿ ಭಾರತಕ್ಕೆ ಹಿಂತಿರುಗಿರುವ ಸಾಧ್ಯತೆಯಿದೆ. ವಿವಿಧ ಇಲಾಖೆಗಳು ಮತ್ತು ಅಧಿಕಾರಿಗಳು ಪ್ರವಾಸೋದ್ಯಮ, ಸಮಾಜ ಕಲ್ಯಾಣ, ಪೊಲೀಸ್, ಚೈಲ್ಡ್‌ಲೈನ್‌ಗಳು ಉನ್ನತ ಮಟ್ಟದಲ್ಲಿ ಅರಿವು

ಮೂಡಿಸಿದ್ದು, ಸಾಕ್ಷಿ ಸಂಗ್ರಹಣೆಗಾಗಿ ಸಾಕಷ್ಟು ಸಮಯವು ಕಳೆದುಹೋಗಿದೆ. ಮತ್ತು ಇತರ ಸಂಘಟನೆಗಳೊಂದಿಗೆ ಸಮೀಕರಣಗಳು ಮತ್ತು ಮಾಧ್ಯಮಗಳು ಈ ಕುರಿತಂತೆ ಇನ್ನೂ ಬಿಸಿ ಮುಟ್ಟಿಸುತ್ತಲೇ ಇದ್ದು, ಈವರೆಗೆ ಸ್ವಾಲ್ವಿಯನ್ನು ಬಂಧಿಸಲಾಗಿಲ್ಲ ಮತ್ತು ಆಕೆ ಮುಕ್ತವಾಗಿ ತಿರುಗುತಿದ್ದಾಳೆ.

ಈ ವಿವಾದಕಾರಿ ಪ್ರಕರಣದಿಂದ ಹೊರಬಂದ ಒಂದು ಒಳ್ಳೆ ವಿಚಾರವೆಂದರೆ, ಕ್ರಮ ಕೈಗೊಳ್ಳುವಂತೆ ವಿವಿಧ ಇಲಾಖೆಗಳಿಗೆ ನಾವು ಸಲ್ಲಿಸಿದ್ದ ಬೇಡಿಕೆ ಹಾಗೂ ಹೇರಿರುವ ಒತ್ತಡದಿಂದಾಗಿ ಅವರು ಈ ಕುರಿತಾಗಿ ಚರ್ಚೆ ನಡೆಸಿ ಸಂಬಂಧ ಪಟ್ಟವರನ್ನು ಸಂಪರ್ಕಿಸಿದ್ದರು. ಬಹುಷಃ ಕೇರಳ ಪ್ರವಾಸೋದ್ಯಮ ಚೌಕಟ್ಟಿನಲ್ಲಿ ಮಕ್ಕಳ ಅತ್ಯಾಚಾರ ಪ್ರಕರಣದಲ್ಲಿ ಈ ರೀತಿಯ ಬೆಳವಣಿಗೆಯು ಇದೇ ಮೊದಲು. ಕೋವಲಂನ್ನು ಶಿಶು ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಶೂನ್ಯ-ಸಹಿಷ್ಣುತೆ ವಲಯವನ್ನಾಗಿ ಘೋಷಿಸಲು ಕೇರಳ ಪ್ರವಾಸೋದ್ಯಮವು ಸಜ್ಜಾಗಿದ್ದು, ಇದು ದೇಶದ ಇತಿಹಾಸದಲ್ಲೇ ಮೊದಲಾಗಿದೆ. ಇದು ಉತ್ತಮವಾಗಿ ಮುಂದುವರಿಯುವಂತೆ ಮತ್ತು ಸ್ಪಷ್ಟ ಕಾರ್ಯರೂಪಗೊಳಿಸಬಹುದಾದಂತಹ ಯಾಂತ್ರಿಕ ವ್ಯವಸ್ಥೆ, ಜವಾಬ್ದಾರಿಯುತ ಕ್ರಮದ ನಿರ್ವಹಣೆ ಮತ್ತು ಸಮುದಾಯಗಳು, ಪೊಲೀಸರು, ಚೈಲ್ಡ್‌ಲೈನ್, ಪ್ರವಾಸೋದ್ಯಮ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಪ್ರವಾಸಿಗರು ಸೇರಿದಂತೆ ಎಲ್ಲರಿಗೂ ಸೂಕ್ತ ರಕ್ಷಣೆಯನ್ನು ಕೊಡುವಂತೆ ಸಮೀಕರಣಗಳು ಒತ್ತಾಯಿಸುತ್ತಲೇ ಇವೆ. ಆದರೆ, ಇದಕ್ಕೆಲ್ಲಾ ತುಂಬಾ ಸಮಯ ತಗುಲುತ್ತದೆ.

ಈ ಮೇಲೆ ಸೂಚಿಸಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರತಿ ಪ್ರದೇಶಕ್ಕೆ ತೆರಳಲು ವಿಸ್ತೃತ ಹಾದಿಗಳಿದ್ದು, ಫಲಿಂತಾಶವನ್ನು ಸಾಧಿಸಲು, ನಾಗರಿಕ ಸಮಾಜ ಸಂಘಟನೆಗಳಾಗಿ ನಾವು ತೀವ್ರ ಒತ್ತಡವನ್ನು ಸಹಿಸಿಕೊಳ್ಳಬೇಕಾಗಿದೆ. ಏನೇ ಆದರೂ,ಪ್ರತ್ಯೇಕ ಪ್ರಕರಣಗಳು ವರದಿಯಾಗಿದೆ ಮತ್ತು ವಿದೇಶಿ ಪ್ರವಾಸಿಗರ ಶಿಶು ಅತ್ಯಾಚಾರವು ಮಾತ್ರವೇ ಪ್ರಾಮುಖ್ಯತೆ ಪಡೆದುಕೊಂಡಿದೆ ಹಾಗೂ ಕೆಲವು ಅಪರಾಧಗಳನ್ನು ಸಾಂದರ್ಭಿಕವಾಗಿ ಹಸ್ತಾಂತರಿಸಲಾಗಿದೆ.ಸಮಸ್ಯೆಯ ತೀವ್ರತೆ, ಅದರ ವಿಸ್ತಾರ ಮತ್ತು ಹಬ್ಬುವಿಕೆ ಇನ್ನೂ ಗೌಪ್ಯವಾಗಿಯೇ ಉಳಿದಿದೆ.

ಈ ಕಳಗಿನ ವಿಭಾಗಗಳು ವಿದೇಶಿ ಮತ್ತು ಪ್ರಾದೇಶಿಕ ಪ್ರವಾಸಿಗರಿಂದ ಉಂಟಾದ ಗಂಡು ಮಕ್ಕಳ ಲೈಂಗಿಕ ಅತ್ಯಾಚಾರದ ವಿಚಾರವನ್ನು ಗಮನಕ್ಕೆ ತರುತ್ತದೆ ಮತ್ತು ಕೇರಳ ಹಾಗೂ ಗೋವಾದಲ್ಲಿ ಇದು ಸ್ವಲ್ಪ ಮಟ್ಟಿಗೆ ಹೇಗೆ ಪರಿಶೀಲನೆಯಲ್ಲಿದೆ, ಇತರ ಅನೇಕ ಪ್ರದೇಶಗಳಿಗೆ ಈ ಸಮಸ್ಯೆಯ ಹಬ್ಬುವಿಕೆ, ಅಧಿಕಾರಿಗಳ ಆಲಕ್ಷ್ಯತನ ಮತ್ತು ನಿರಾಕರಣ ಹಾಗೂ  ಎಂಬುದನ್ನು ತೋರಿಸುತ್ತದೆ. ಉದ್ಯಮದ ಪ್ರಬಲತೆ ಮುಂದುವರಿಕೆ ಮುಂತಾದ ವಿಚಾರಗಳನ್ನು ಬಹಿರಂಗಪಡಿಸುತ್ತದೆ.

**ಪ್ರವಾಸೋದ್ಯಮ ಕೇಂದ್ರಗಳಲ್ಲಿ ಗಂಡುಮಕ್ಕಳ ಶೋಷಣೆ-ಬೆಳೆಯುತ್ತಿರುವ ಪೆಡಂಭೂತ**

ಈ ಮೊದಲಿನ ವಿಭಾಗಗಳಲ್ಲಿ ಸೂಚಿಸಿದಂತೆ, ಲೈಂಗಿಕ ಶೋಷಣೆಯಲ್ಲಿ ಭಾಗಿಯಾಗಿದ್ದ ಹೆಚ್ಚಿನ ಪ್ರವಾಸಿಗರು ವಿದೇಶಿಯರು. ಅವರಿಂದ ಶೋಷಣೆಗೊಳಪಟ್ಟವರು ಮಹಿಳೆಯರು ಅಥವಾ ಹೆಣ್ಣುಮಕ್ಕಳು ಎಂಬುದಾಗಿ ನಂಬಲಾಗಿತ್ತು. ಆದರೆ, ಹೆಚ್ಚಿನಬಾರಿ ಬಲಿಪಶುಗಳು ಗಂಡುಮಕ್ಕಳೇ ಆಗಿದ್ದಾರೆ. ಸಲಿಂಗಕಾಮದ ಬಗ್ಗೆ ಸಮಾಜವು ಹೊಂದಿರುವ ದ್ವಿಗುಣ ಮೌಲ್ಯ ಮತ್ತು ಭಾರತದಲ್ಲಿ ಅದು ಇನ್ನೂ ದೋಷಾತ್ಮಕವಾಗಿದೆ ಎಂಬ ವಾಸ್ತವತೆಯು ಸಮಸ್ಯೆಯ ಗೋಚರತೆಯನ್ನು ಕಡಿಮೆ ಮಾಡಿದೆ. ಇದರೊಂದಿಗೆ ಪ್ರವಾಸಿಗರ ಅನಾಮಿಕತೆಯು ಈ ಶೋಷಣೆ ಪ್ರಕರಣಗಳು ಇನ್ನಷ್ಟು ಮೂಲೆಗುಂಪಾಗಲು ಸಹಕಾರಿಯಾಗಿದೆ.

2006ರಲ್ಲಿ , ಗಂಡು ಮಕ್ಕಳ ವ್ಯಭಿಚಾರದ ಬಗ್ಗೆ ದಕ್ಷಿಣ ಏಶಿಯಾದಲ್ಲಿ ಸಂಶೋಧನೆಯನ್ನು ಆಯೋಜಿಸಲಾಗಿತ್ತು. ಗಂಡುಮಕ್ಕಳ ವ್ಯಭಿಚಾರವು ಭಾರತ, ನೇಪಾಳ, ಶ್ರೀಲಂಕಾ, ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಸನ್ನಿಹಿತದ ಸಮಸ್ಯೆಯಾಗಿದೆ ಎಂಬುದಾಗಿ ಈ ಅಧ್ಯಯನವು ಸೂಚಿಸಿತ್ತು. ರಸ್ತೆಗಳಲ್ಲಿ, ಮಾರುಕಟ್ಟೆಗಳಲ್ಲಿ, ಬಸ್ ನಿಲ್ದಾಣಗಳಲ್ಲಿ, ಹೋಟೇಲ್‌ಗಳಲ್ಲಿ, ರೆಸ್ಟೋರೆಂಟ್‌ಗಳಲ್ಲಿ ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ಶೋಷಣೆಯು ನಡೆಯುತ್ತಿದೆ. ರಸ್ತೆಬದಿಗಳಲ್ಲಿ ವಾಸಿಸುತ್ತಿರುವ ಹೆಚ್ಚಿನ ಸಂಖ್ಯೆಯ ಬಾಲಕರು ಶೋಷಣೆಯ ಬಲಿಪಶುಗಳು ಮತ್ತು ಬಲಾತ್ಕಾರವಾಗಿ

ಶೋಷಿಸಲ್ಪಡುತ್ತಿರುವ ಬಾಲಕರ ಸರಾಸರಿ ಪ್ರಾಯವು 12.5 ವರ್ಷಗಳು ಅಥವಾ ಅದಕ್ಕಿಂತಲೂ ಕಡಿಮೆ. ಲೈಂಗಿಕ ಶೋಷಣೆಗೊಳಗಾದ ಹೆಚ್ಚಿನ ಬಾಲಕರು ವ್ಯಭಿಚಾರದ ಬಲೆಗೆ ಬೀಳುವ ಮುನ್ನವೇ ಲೈಂಗಿಕ ಅತ್ಯಾಚಾರಕ್ಕೆ ಒಳಗಾಗಿರುತ್ತಾರೆ.

ದಕ್ಷಿಣ ಏಶಿಯಾದ ಅಧ್ಯಯನದ ಅನುಸಾರ, ಸಮೀಕರಣಗಳು ಈ ಸಮಸ್ಯೆಯ ಬಗ್ಗೆ ಇನ್ನಷ್ಟು ಸಂಶೋಧನೆ ನಡೆಸಲು ಮತ್ತು ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ನಿರ್ದಿಷ್ಟ ಜಾಲವನ್ನು ಅರಿಯಲು ಬಯಸಿತು.ಇಸಿಪಿಎಟಿಯ ಅಂತಾರಾಷ್ಟ್ರೀಯ ಬೆಂಬಲದೊಂದಿಗೆ ಭಾರತದ ಪ್ರಸಿದ್ಧ ಪ್ರವಾಸಿ ಕೇಂದ್ರಗಳಲ್ಲಿ ಗಂಡು ಮಕ್ಕಳ ಅತ್ಯಾಚಾರದ ಕುರಿತಾಗಿ ಅಧ್ಯಯನವನ್ನು ಪ್ರಾರಂಭಿಸಲಾಯಿತು. 2009ರಲ್ಲಿ ಹೊರಹೊಮ್ಮಿದ ಈ ಸಂಶೋಧನೆಯು, ಭಾರತದ ಪ್ರಸಿದ್ಧ ಧಾರ್ಮಿಕ ಕೇಂದ್ರಗಳಾದ ತಿರುಪತಿ(ಆಂಧ್ರ ಪ್ರದೇಶ), ಪುರಿ(ಒರಿಸ್ಸಾ) ಮತ್ತು ಗುರುವಾಯೂರು(ಕೇರಳ)ಮುಂತಾದ ಕಡೆಗಳಲ್ಲಿ ವ್ಯಭಿಚಾರ ಮತ್ತು ಲೈಂಗಿಕ ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಸೂಕ್ತ ಪುರಾವೆಗಳನ್ನು ಹೊಂದಿದೆ.

***ತಿರುಪತಿ(ಆಂಧ್ರಪ್ರದೇಶ)***

ತಿರುಪತಿಯು ತಿರುಮಲ ಬೆಟ್ಟದಲ್ಲಿರುವ ಶ್ರೀ ವೆಂಕಟೇಶ್ವರ ದೇವಾಲಯಕ್ಕೆ ಹೆಸರುವಾಸಿಯಾಗಿದೆ. ಇದು ವಿಶ್ವದಲ್ಲೇ ಅತೀ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಧಾರ್ಮಿಕ ಸ್ಥಳವಾಗಿದೆ. 2007ರಲ್ಲಿ 20 ಮಿಲಿಯನ್‌ನಷ್ಟು ಸಂಖ್ಯೆಯ ಪ್ರವಾಸಿಗರು ಇಲ್ಲಿಗೆ ಆಗಮಿಸಿದ್ದು, ಇದರಲ್ಲಿ ಹೆಚ್ಚಿನವರು ಪ್ರಾದೇಶಿಕ ಮತ್ತು ಅನಿವಾಸಿ ಭಾರತೀಯರಾಗಿದ್ದಾರೆ. ಅತಿ ಕಡಿಮೆ ಸಂಖ್ಯೆಯ ವಿದೇಶಿ ಪ್ರವಾಸಿಗರು ತಿರುಪತಿಗೆ ಆಗಮಿಸುತ್ತಾರೆ. ಈ ಸಂಶೋಧನೆಯಲ್ಲಿ ನಾವು ಒಂಬತ್ತು ಗಂಡು ಮಕ್ಕಳ ಸಂದರ್ಶನ ನಡೆಸಿದ್ದು, ಎಲ್ಲಾ ಮಕ್ಕಳು ಎಂಟರಿಂದ ಹದಿನೆಂಟು ವರ್ಷ ಪ್ರಾಯದವರಾಗಿದ್ದರು.

ನಿರಂತರವಾಗಿ ಲೈಂಗಿಕತೆಗಾಗಿ ತಮ್ಮ ಬಳಿ ಬರುವ ಪ್ರಾದೇಶಿಕ ಪ್ರವಾಸಿಗರ ಬಗ್ಗೆ ಈ ಮಕ್ಕಳು ಮಾತನಾಡಿದ್ದರು.ಇದರಲ್ಲಿ ಕೆಲವು ಪ್ರವಾಸಿಗರು ತಮ್ಮ ಮುಂದಿನ ಭೇಟಿಯ ವೇಳೆಯು ಅದೇ ಮಗುವನ್ನು ಪಡೆಯಲು ಬಯಸುತ್ತಾರೆ. ಈ ಕಾರ್ಯವನ್ನು ತಿರುಪತಿ ದೇವಾಲಯಕ್ಕೆ ಭೇಟಿ ನೀಡಿದ ನಂತರ ಮಕ್ಕಳನ್ನು ಫೋನ್ ಮೂಲಕ, ಇ ಮೈಲ್(ಸೈಬರ್ ಕೆಫೆ ಬಳಸುವ ಮಕ್ಕಳಲ್ಲಿ) ಮೂಲಕ ಸಂಪರ್ಕಿಸಿ , ಸ್ಥಳ ನಿಗದಿಪಡಿಸಿ ಮಾಡಲಾಗುತ್ತದೆ. ಗ್ರಾಹಕರೊಂದಿಗೆ ಮಧ್ಯೆ ಶಿಫಾರಸ್ಸು ಮಾಡಲು ಮಧ್ಯವರ್ತಿಗಳಿರುವುದಿಲ್ಲ.ಕೆಲವು ಮಕ್ಕಳು ತಾವು ಆರು ಅಥವಾ ಹತ್ತು ವರ್ಷವಿರುವಾಗಲೇ ಅತ್ಯಾಚಾರಕ್ಕೊಳಗಾಗಿದ್ದಾರೆ. ಹದಿನೈದು ವರ್ಷವಾದಾಗ, ಪ್ರಾದೇಶಿಕ ಪ್ರವಾಸಿಗರಿಗಾಗಿ ಮತ್ತು ಸ್ಥಳೀಯರಿಗಾಗಿ ವ್ಯಭಿಚಾರ ಏರ್ಪಾಟಿನಲ್ಲಿ ತೊಡಗಿಕೊಂಡಿರುತ್ತಾರೆ. ಹೋಟೇಲ್‌ಗಳಲ್ಲಿ, ಲಾಡ್ಜ್‌ಗಳಲ್ಲಿ, ನಿರ್ಜನ ಪ್ರದೇಶಗಳಲ್ಲಿ, ಆಟದ ಮೈದಾನಗಳಲ್ಲಿ, ಪಾರ್ಕ್‌ಗಳಲ್ಲಿ, ಸಿನಿಮಾ ಮಂದಿರಗಳಲ್ಲಿ, ರೈಲ್ವೇ ನಿಲ್ದಾಣಗಳಲ್ಲಿ, ಸ್ಟೇಡಿಯಂಗಳಲ್ಲಿ, ಸ್ಮಶಾನಗಳಲ್ಲಿ ಲೈಂಗಿಕ ಅತ್ಯಾಚಾರವನ್ನು ನಡೆಸಲಾಗುತ್ತದೆ. ಪ್ರಾದೇಶಿಕ ಪ್ರವಾಸಿಗರು ಈ ಉದ್ದೇಶಕ್ಕಾಗಿ ಸಣ್ಣ ಲಾಡ್ಜ್ ಮತ್ತು ಕೋಣೆಗಳನ್ನು ಬಾರ್‌ಗಳಲ್ಲಿ ಪದೇ ಪದೇ ಬಳಸುತ್ತಿರುತ್ತಾರೆ. ಈ ಮಕ್ಕಳು ಪ್ರತಿ ದಿನಕ್ಕೆ 500-2000 ರೂ. ಸಂಪಾದಿಸುತ್ತಾರೆ.ಕೆಲವು ಮಕ್ಕಳು ಹೋಟೇಲ್‌ಗಳಲ್ಲಿ ಪಾರ್ಟ್ ಟೈಂ ಕೆಲಸ ಮಾಡುತ್ತಾರೆ. ತಮ್ಮೊಂದಿಗೆ ಲಾಡ್ಜ್‌ಗಳಲ್ಲಿ ಮತ್ತು ಹೋಟೇಲ್‌ಗಳಲ್ಲಿ ಕೆಲಸ ಮಾಡುವ ಹಿರಿಯ ವ್ಯಕ್ತಿಗಳಿಂದ ಇವರು ಅತೀ ಕಡಿಮೆ ಹಣಕ್ಕೆ ನಿರಂತರ ಲೈಂಗಿಕ ಶೋಷಣೆಗೊಳಗಾಗಿದ್ದಾರೆ. ಏನೇ ಆದರೂ, ಬಾಯಿ ಚಪಲ ಮತ್ತು ಲೈಂಗಿಕ ಚಪಲ ಎರಡನ್ನೂ ತೀರಿಸಿಕೊಳ್ಳಲು ಬರುವ ಗ್ರಾಹಕರೊಂದಿಗೆ ಸಂಪರ್ಕ ಕಲ್ಪಿಸುವುದರಿಂದ ಇವರು ಇಲ್ಲೇ ತಮ್ಮ ಕೆಲಸವನ್ನು ಮುಂದುವರಿಸುತ್ತಾರೆ. ಗಂಡು ಮಕ್ಕಳು ತಮ್ಮ ಕುಟುಂಬ ನಿರ್ವಹಣೆಯನ್ನೂ ಮಾಡಬೇಕಾಗುವುದರಿಂದ ವ್ಯಭಿಚಾರಕ್ಕೆ ಒತ್ತಾಯಿಸುವ ಗ್ರಾಹಕರ ಒತ್ತಡಕ್ಕೆ ಮಣಿಯುತ್ತಾರೆ.ಈ ಲೈಂಗಿಕ ಶೋಷಣೆಯಿಂದಾಗಿ ತಮಗೆ ಹಲವು ಬಾರಿ ಅವಮಾನವಾಗಿರುವುದರಿಂದಾಗಿ, ಲೈಂಗಿಕ ವ್ಯಾಪಾರದಿಂದ ಹೊರಬರುವ ಅವಕಾಶವೇ ಇಲ್ಲ ಎಂಬುದಾಗಿ ಅವರು ಅಭಿಪ್ರಾಯಪಡುತ್ತಾರೆ.ಸಾಮಾಜಿಕ ನಿಂದನೆಯು ಕಡಿಮೆಯಿರುವುದರಿಂದ ಮತ್ತು ಗರ್ಭಧಾರಣೆಯ ಭಯವೂ ಇಲ್ಲದಿರುವುದರಿಂದ ಹೆಣ್ಣು ಮಕ್ಕಳಿಗೆ ಹೋಲಿಸಿದರೆ, ಸೆಕ್ಸ್ ಮಾರಾಟದ ಭಾಗಿಯಾಗುವಿಕೆಯಲ್ಲಿ ಗಂಡುಮಕ್ಕಳಿಂದ ಕುಟುಂಬದ ಸದಸ್ಯರಿಗೆ ಅಪಾಯದ ಪ್ರಮಾಣ ಕಡಿಮೆಯಾಗಿದೆ.

*ಪುರಿ(ಒರಿಸ್ಸಾ)*

ಪುರಿಯು 12ನೇ ಶತಮಾನದ ಜಗನ್ನಾಥ ದೇವರ ದೇವಾಲಯವಿರುವ ಧಾರ್ಮಿಕ ಸ್ಥಳವಾಗಿದೆ. 2007ರಲ್ಲಿ ಪುರಿಗೆ ಆಗಮಿಸಿದ ಪ್ರಾದೇಶಿಕ ಪ್ರವಾಸಿಗರ ಸಂಖ್ಯೆಯು ಸುಮಾರು 6 ಮಿಲಿಯನ್ ಆಗಿತ್ತು ಮತ್ತು ಸುಮಾರು 42000ದಷ್ಟು ವಿದೇಶಿ ಪ್ರವಾಸಿಗರು ಆಗಮಿಸಿದ್ದರು. ಪುರಿಯ ಸಮೀಪ ಪೆಂಟಕೋಟಾ ಎಂಬ ಮೀನುಗಾರಿಕ ಗ್ರಾಮವಿದ್ದು, ಆಂಧ್ರಪ್ರದೇಶದಿಂದ ವಲಸೆ ಬಂದ ಹಲವು ಮೀನುಗಾರಿಕ ಕುಟುಂಬಗಳು ಇಲ್ಲಿ ವಾಸಿಸುತ್ತಿವೆ.ನಾವು ಹದಿಮೂರು ಗಂಡು ಮಕ್ಕಳ ಸಂದರ್ಶನ ನಡೆಸಿದ್ದು, ಅದರಲ್ಲಿ ಎಂಟು ಮಂದಿ ಪೆಂಟಕೋಟಾದಿಂದ ಮತ್ತು ಐದು ಮಂದಿ ಪುರಿ ಬೀಚ್ ಸಮೀಪದವರಾಗಿದ್ದಾರೆ. ಇವರೆಲ್ಲರೂ, ಆರರಿಂದ ಹದಿನೆಂಟು ವರ್ಷದೊಳಗಿನವರಾಗಿದ್ದು, ಲೈಂಗಿಕ ಶೋಷಣೆಯಿಂದ ಬಾಧಿತರಾಗಿದ್ದಾರೆ.

ಈ ಮಕ್ಕಳಿಗೆ ಪ್ರಾದೇಶಿಕ ಪ್ರವಾಸಿಗರಿಗಿಂತ ವಿದೇಶಿ ಪ್ರವಾಸಿಗರೊಂದಿಗೆ ಸಂಬಂಧ ಬೆಳೆಸಿಕೊಳ್ಳುವುದು ಅತ್ಯಂತ 'ಲಾಭಕರ'ವಾಗಿದೆ. ಯಾಕೆಂದರೆ, ವಿದೇಶಿ ಪ್ರವಾಸಿಗರು ಇವರಿಗೆ ಗೊಂಬೆಗಳು, ಚಾಕಲೇಟ್‌ಗಳು, ಸೈಕಲ್, ಒಳ್ಳೆಯ ಉಡುಪುಗಳು ಅಲ್ಲದೆ, ಕೆಲವೊಮ್ಮೆ ಮನೆಯ ಪುನರ್ನಿರ್ಮಾಣಕ್ಕಾಗಿ ಹಣವನ್ನೂ ನೀಡುತ್ತಾರೆ. ಲೈಂಗಿಕ ಅತ್ಯಾಚಾರವು ರೈಲ್ವೇ ನಿಲ್ದಾಣ, ಹೋಟೇಲ್, ಸ್ಥಳೀಯ ಸಣ್ಣ ಆಹಾರ ಕೇಂದ್ರಗಳಲ್ಲಿ(ಡಾಬಾಗಳಲ್ಲಿ), ಲಾಡ್ಜ್‌ಗಳಲ್ಲಿ, ಬೀಚ್, ಮಸಾಜ್ ಪಾರ್ಲರ್ ಮತ್ತು ಸೂಳೆಗಾರಿಕೆ ಮನೆಯಲ್ಲಿ ನಡೆಯುತ್ತದೆ. ಹೆಚ್ಚಿನ ವಿದೇಶಿ ಪ್ರವಾಸಿಗರು ಹೋಟೇಲ್‌ಗಳನ್ನು ಬಳಸಿಕೊಂಡರೆ, ಪ್ರಾದೇಶಿಕ ಪ್ರವಾಸಿಗರು ಈ ಉದ್ದೇಶಕ್ಕಾಗಿ ಬಾರ್‌ನಲ್ಲಿನ ಸಣ್ಣ ಲಾಡ್ಜ್ ಮತ್ತು ಕೋಣೆಗಳನ್ನು ಗೊತ್ತುಪಡಿಸುತ್ತಾರೆ.ಪುರಿಯಲ್ಲಿ ಅನೇಕ ಸಂಖ್ಯೆಯ ಮಸಾಜ್ ಪಾರ್ಲರ್ ಮತ್ತು ಹೆಲ್ತ್ ಕ್ಲಬ್‌ಗಳು ಅಣಬೆಯಂತೆ ತಲೆಯೆತ್ತಿದ್ದು, ಹಿರಿಯರು ಮತ್ತು ದೊಡ್ಡವರೊಂದಿಗೆ ವ್ಯಭಿಚಾರದಲ್ಲಿ ತೊಡಗಿರುವ(ಎರಡೂ ಗಂಡು ಮತ್ತು ಹೆಣ್ಣು ಮಕ್ಕಳು) ವಿದೇಶಿ ಮತ್ತು ಪ್ರಾದೇಶಿಕ ಪ್ರವಾಸಿಗರಿಗೆ ಸೇವೆ ನೀಡುವುದು ಇದರ ಪ್ರಾಥಮಿಕ ಉದ್ದೇಶವಾಗಿದೆ.ಕೆಲವು ವಿದೇಶಿ ಪ್ರವಾಸಿಗರು ಸ್ಲಂ ಮತ್ತು ಬಡವರು ವಾಸವಾಗಿರುವ ಪ್ರದೇಶಗಳ ಸಮೀಪದಲ್ಲಿರುವ ಹೋಟೇಲ್‌ಗಳಲ್ಲಿ ತಂಗುತ್ತಾರೆ. ಅವರು ಸ್ಲಂ ಪ್ರದೇಶಕ್ಕೆ ತೆರಳುತ್ತಾರೆ ಮತ್ತು ಬಡ ಕುಟುಂಬಗಳು ತಮ್ಮಲ್ಲಿಗೆ ಆಗಮಿಸಿದ ವಿದೇಶಿಯರನ್ನು ಕಂಡು ಅವರಿಗೆ ಅಭಾರಿಯಾಗುತ್ತಾರೆ. ವಿದೇಶಿಯರು ಆ ಬಡಕುಟುಂಬಗಳಲ್ಲಿನ ಮಕ್ಕಳನ್ನು ಕರೆದುಕೊಂಡು ಹೋಗಿ ಅವರ ಮೇಲೆ ಅತ್ಯಾಚಾರವೆಸಗುತ್ತಾರೆ. ಇದು ಕೆಲವೊಮ್ಮೆ ಬಲವಂತದ್ದಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಮಕ್ಕಳು ಏನೂ ಹೇಳುವುದಿಲ್ಲ ಯಾಕೆಂದರೆ ಅವರು ಭಯಭೀತರಾಗಿರುತ್ತಾರೆ. ತಾವು ಈ ಅವಕಾಶವನ್ನು ತಿರಸ್ಕರಿಸಿದರೆ ತಮ್ಮ ಸುಖಜೀವನದ ಅವಕಾಶವನ್ನು ಕಳೆದುಕೊಳ್ಳಬೇಕಾಗಬಹುದು ಎಂಬುದಾಗಿ ಅವರು ಅಲೋಚಿಸುತ್ತಾರೆ. ಲೈಂಗಿಕ ವಿನಿಮಯದಿಂದಾಗಿ ತಮಗೆ ಬೇಕಾದ ಉತ್ತಮ ಉಡುಪುಗಳು, ಆಹಾರ, ಹೊಸ ಸ್ಥಳಗಳ ವೀಕ್ಷಣೆ, ಸಿನಿಮಾ, ಹಣ ಮತ್ತು ಕುಟುಂಬಕ್ಕೆ ಬೇಕಾದ ಎಲ್ಲಾ ವಸ್ತುಗಳು ದೊರೆತಿವೆ ಎಂಬುದಾಗಿ ಮಕ್ಕಳು ಸಂದರ್ಶನದ ವೇಳೆ ತಿಳಿಸಿದ್ದಾರೆ. ಹೆಚ್ಚಿನ ಮಕ್ಕಳು ವಿಸ್ತೃತ ಶ್ರೇಣಿಯ ಪ್ರವಾಸಿಗರೊಂದಿಗೆ ಲೈಂಗಿಕತೆ ನಡೆಸಿದ್ದು, ಕೆಲವರು ಕೇವಲ 50 ರೂ. ನೀಡಿದರೆ ಇನ್ನು ಕೆಲವರು 200 ರೂ. ನೀಡುತ್ತಾರೆ. ಈ ದರಗಳು ದಿನದಿಂದ ದಿನಕ್ಕೆ ಬದಲಾಗುತ್ತಿರುತ್ತದೆ.

*ಗುರುವಾಯೂರು(ಕೇರಳ)*

ಗುರುವಾಯೂರಿನಲ್ಲಿ ಪ್ರಸಿದ್ಧ ಶ್ರೀಕೃಷ್ಣ ದೇವಾಲಯವಿದ್ದು, ಇದೊಂದು ಪ್ರಸಿದ್ಧ ಪ್ರಾದೇಶಿಕ ಪ್ರವಾಸಿ ತಾಣವಾಗಿದೆ, 2006ರಲ್ಲಿ ಸುಮಾರು ಒಂದು ಮಿಲಿಯನ್ ಪ್ರಾದೇಶಿಕ ಪ್ರವಾಸಿಗರು ಮತ್ತು ಸುಮಾರು 1500 ವಿದೇಶಿ ಪ್ರವಾಸಿಗರು ಗುರುವಾಯೂರಿಗೆ ಭೇಟಿ ನೀಡಿದ್ದರು. ಗುರುವಾಯೂರಿನಲ್ಲಿ

ಶಿಶು ಲೈಂಗಿಕ ಅತ್ಯಾಚಾರದ ವಿಚಾರವು ಕಡಿಮೆ ಗೋಚರತೆಯನ್ನು ಹೊಂದಿದೆ. ತಿರುಪತಿ ಮತ್ತು ಪುರಿಯಂತೆ ಇಲ್ಲಿ ಮಕ್ಕಳು ರಸ್ತೆಬದಿಗಳಲ್ಲಿ ವಾಸಿಸುವುದು ಕಂಡುಬರುವುದಿಲ್ಲ. ಕೇರಳದಲ್ಲಿ ಅಧಿಕಾರಿಗಳಿಂದ ವಿಧಿಸಲ್ಪಟ್ಟ ಬಾಲಕಾರ್ಮಿಕ ನಿಷೇಧದ ಫಲವಾಗಿ ಇಲಾಖೆಯ ಜೀಪು ಜಿಲ್ಲೆಯಾದ್ಯಂತ ಸುತ್ತಾಡಿ ಬೀದಿಗಳಲ್ಲಿ ವಾಸಿಸುತ್ತಿದ್ದ ವಸತಿರಹಿತ ಮಕ್ಕಳನ್ನು ಸ್ಥಳಾಂತರಿಸಲಾಗಿತ್ತು. ಇದರಿಂದಾಗಿ ಶಿಶು ಅತ್ಯಾಚಾರ ಪ್ರಕರಣವು ಇನ್ನಷ್ಟು ಗೌಪ್ಯ ಹಾಗೂ ರಹಸ್ಯವಾಗಿ ಪರಿಣಮಿಸಿದೆ.

ಏನೇ ಆದರೂ, ಸುತ್ತಲಿನ ಗ್ರಾಮಗಳಲ್ಲಿರುವ ಸಮುದಾಯ ಸದಸ್ಯರೊಂದಿಗೆ, ಅಂಗನವಾಡಿ ಟೀಚರ್‌ಗಳು ಮತ್ತು ಕಾರ್ಯಕರ್ತರೊಂದಿಗೆ ನಡೆಸಿದ ಚರ್ಚೆಯಲ್ಲಿ, ಗಂಡು ಮಕ್ಕಳು ಅತ್ಯಾಚಾರಕ್ಕೊಳಗಾಗುತ್ತಾರೆ ಮತ್ತು ವ್ಯಭಿಚಾರದಲ್ಲಿ ತೊಡಗಿಕೊಂಡಿದ್ದಾರೆ ಎಂಬುದು ಸಾಮಾನ್ಯ ಸಂಗತಿಯಾಗಿದೆ ಎಂಬುದಾಗಿ ತಿಳಿದುಬಂದಿದೆ. ಪ್ರಚಲಿತದಲ್ಲಿರುವ ಸಲಿಂಗಕಾಮ/ಉಭಯಲಿಂಗತ್ವದ ಸುತ್ತಲಿನ ಕಥೆಯು ಸಾಕಷ್ಟಿದ್ದು, ಜೊತೆಗೆ, ಇದಕ್ಕೆ ಸಾಂಸ್ಕೃತಿಕ ಸಮ್ಮತಿಯೂ ಇರುವ ಹಾಗಿದೆ. ಹಿಂದಿನ ದಿನಗಳಲ್ಲಿ ಚಾವಕ್ಕಾ ಮತ್ತು ಪೊನ್ನಾನಿ ಪ್ರದೇಶಗಳಲ್ಲಿ ಸಮುದ್ರ ವ್ಯಾಪಾರವು ಸಾಮಾನ್ಯವಾಗಿತ್ತು. ಪುರುಷರು ಅನೇಕ ದಿನಗಳ ಮಟ್ಟಿಗೆ ಸಮುದ್ರ ವ್ಯಾಪಾರಕ್ಕೆಂದು ಹೋದಾಗ ಲೈಂಗಿಕ ಸೇವೆಗಾಗಿ ತಮ್ಮೊಂದಿಗೆ ಸಣ್ಣ ಪ್ರಾಯದ ಹುಡುಗರನ್ನೂ ಕರೆದುಕೊಂಡು ಹೋಗುತ್ತಿದ್ದರು. ಪ್ರಸಕ್ತ ವಿದ್ಯಮಾನದಲ್ಲಿ ಹೆಚ್ಚಿನ ಪುರುಷರು ಗಲ್ಫ್ ರಾಷ್ಟ್ರಗಳಲ್ಲಿದ್ದು, ಅವರು ಮನೆಗೆ ಕಳುಹಿಸಿಕೊಡುವ ಹಣವು ಅವರ ಕುಟುಂಬದ ಆರ್ಥಿಕತೆಯ ಜೀವನಾಧರವಾಗಿದೆ. ಅವರು ಊರಿಗೆ ಮರಳಿದಾಗ, ಗಂಡುಮಕ್ಕಳ ಅತ್ಯಾಚಾರದಲ್ಲಿ ತೊಡಗಿಕೊಳ್ಳುತ್ತಾರೆ. ಪುರುಷರು ಹೆಚ್ಚಿನ ವೈವಾಹಿಕ ಸಂಬಂಧ ಅಥವಾ ಮಹಿಳಾ ಸೂಳೆಗಾರಿಕೆ ಅಪೇಕ್ಷೆ ಮುಂತಾದವುಗಳಲ್ಲಿ ತೊಡಗಿಕೊಂಡಿಲ್ಲ ಎಂಬುದಾಗಿ ಮಹಿಳೆಯರು ಹಲವು ಬಾರಿ ಸಮಾಧಾನಪಟ್ಟುಕೊಂಡಿದ್ದಾರೆ ಎಂಬ ವಿಚಾರವು ಮಹಿಳೆಯರೊಂದಿಗೆ ನಡೆಸಿದ ಚರ್ಚೆಯಿಂದ ಬಹಿರಂಗಗೊಂಡಿದೆ. ಗುರುವಾಯೂರಿನಲ್ಲಿ ಗಂಡುಮಕ್ಕಳ ಲೈಂಗಿಕ ಶೋಷಣೆಯ ಕುರಿತ ವಿಚಾರವು ಕಾನೂನು ಕಾರ್ಯನಿರ್ವಹಣಾ ಮಂಡಳಿಗೆ ತಿಳಿದುಬಂದಿದ್ದರೂ, ಈ ಕುರಿತಂತೆ ಈ ಪ್ರದೇಶದಲ್ಲಿ ವಾಸಿಸುವ ಯಾರೊಬ್ಬರೂ ದೂರು ದಾಖಲಿಸಿಕೊಂಡಿಲ್ಲ ಅಥವಾ ಯಾವುದೇ ಅಧಿಕೃತ ದೂರು ದಾಖಲಾಗಿಲ್ಲ.ಗುರುವಾಯೂರಿನಲ್ಲಿ ವಿದೇಶಿ ಪ್ರವಾಸಿಗರು ಶಿಶು ಅತ್ಯಾಚಾರದಲ್ಲಿ ತೊಡಗಿಕೊಂಡಿರುವ ಬಗ್ಗೆ ಯಾವುದೇ ಸಾಕ್ಷಿಗಳು ಕಂಡುಬಂದಿಲ್ಲ. ಇಂತಹ ಅತ್ಯಾಚಾರದಲ್ಲಿ ತೊಡಗಿರುವ ಪ್ರವಾಸಿಗರು ಪ್ರಾಥಮಿಕವಾಗಿ ಕೇರಳ ಮೂಲದವರಾಗಿದ್ದಾರೆ ಎಂಬುದಾಗಿ ಸಮುದಾಯ ಸದಸ್ಯರೊಂದಿಗೆ ಮಾಡಿದ ಚರ್ಚೆಯಿಂದ ತಿಳಿದುಬಂದಿದೆ.

### *ಅಸಮರ್ಥ ಕಾನೂನು ಮತ್ತು ಅನುಷ್ಠಾನದ ಕೊರತೆ*

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಕಾರ್ಮಿಕ ಸಚಿವಾಲಯ, ಶಿಶು ರಕ್ಷಣೆಯ ರಾಷ್ಟ್ರೀಯ ಆಯೋಗ, ರಾಷ್ಟ್ರೀಯ ಮಾನವ ಹಕ್ಕು ಆಯೋಗ ಇವುಗಳು ಶಿಶು ಸಂಬಂಧಿ ಕಾನೂನಿನ ಬಗ್ಗೆ ಆಸಕ್ತಿ ಹೊಂದಿರುವ ಕೆಲವು ಪ್ರಮುಖ ಮಂಡಳಿಗಳಾಗಿವೆ. ಶಿಶು ಅತ್ಯಾಚಾರಕ್ಕೆ ಸಂಬಂಧಿಸಿದ ವಿಶೇಷವಾಗಿ ಅಕ್ರಮ ಸಾಗಾಣಿಕೆ, ಲೈಂಗಿಕ ಮತ್ತು ಬಲವಂತದ ಕಾರ್ಮಿಕರು, ಶಿಶು ಕಾಮಪ್ರಚೋದಕ ಸಾಹಿತ್ಯ, ಶಿಶು ಲೈಂಗಿಕ ಪ್ರವಾಸೋದ್ಯಮ ಮತ್ತು ಲೈಂಗಿಕ ಅತ್ಯಾಚಾರ ಮುಂತಾದವುಗಳಿಗೆ ಸಂಬಂಧಿಸಿದ ವ್ಯವಸ್ಥೆಯ ಪ್ರಧಾನ ಅಂತರವು ಮುಂದುವರಿಯುತ್ತಿದೆ. ಭಾರತದಲ್ಲಿ ಲೈಂಗಿಕ ಅಪರಾಧ ನಿರ್ವಹಣೆಗೆ ಸಂಬಂಧಿಸಿದ ಕಾನೂನುಗಳು ನಿರ್ದಿಷ್ಟವಾಗಿ ಶಿಶು ಲೈಂಗಿಕ ಅತ್ಯಾಚಾರ ಸಮಸ್ಯೆಯನ್ನು ಎದುರಿಸುವುದಿಲ್ಲ. ವಾಸ್ತವವಾಗಿ, ಭಾರತೀಯ ದಂಡ ಸಂಹಿತೆ 1860(ಐಪಿಸಿ)ಯು 'ಶಿಶು ಅತ್ಯಾಚಾರ'ವನ್ನು ವ್ಯಾಖ್ಯಾನಿಸುವುದಿಲ್ಲ ಮತ್ತು ಇಲ್ಲಿಯವರೆಗೆ ಶಿಶು ಲೈಂಗಿಕ ಅತ್ಯಾಚಾರವು

ಭಾರತೀಯ ಕಾನೂನು ವ್ಯವಸ್ಥೆಯಿಂದ ನಿರ್ಲ್ಯಕ್ಷ್ಯಕೊಳಪಡುತ್ತಾ ಬಂದಿದೆ. ಗೋವಾ ಶಿಶು ಕಾಯಿದೆ(2003), ಶಿಶು ಅತ್ಯಾಚಾರ ಮತ್ತು ಶಿಶು ಸಾಗಾಣಿಕೆ ಯನ್ನು ನಿರೂಪಿಸಿದ ಮೊದಲ ಕಾಯಿದೆಯಾಗಿದೆ ಆದರೆ, ಈ ಮೊದಲು ಸೂಚಿಸಿದಂತೆ ಅದರ ಅನುಷ್ಠಾನದಲ್ಲಿ ಬಹಳ ಅತೃಪ್ತಿಯಿದೆ.

ಭಾರತೀಯ ಕಾನೂನು ವ್ಯವಸ್ಥೆಯು ಈಗಲೂ ಪೆನೋ-ವಜಿನಲ್ ಸೆಕ್ಸ್‌ನ್ನೇ ಅಂಗೀಕರಿಸುತ್ತದೆ. ಐಪಿಸಿ ಯ 377ನೇ ಪರಿಚ್ಛೇದವು 'ನೈಸರ್ಗಿಕ ನಿಯಮದ ವಿರುದ್ಧದ ಲೈಂಗಿಕ ಸಂಭೋಗ'ಅಪರಾಧ ಎನ್ನುತ್ತದೆ. ಆದ್ದರಿಂದ ಈ ಪರಿಚ್ಛೇದವನ್ನು ಮೌಖಿಕ ಲೈಂಗಿಕತೆ(ಭಿನ್ನ ಲೈಂಗಿಕತೆ ಮತ್ತು ಸಲಿಂಗ ಕಾಮ) ಮುಂತಾದ ವಿಸ್ತೃತ ವ್ಯಾಪ್ತಿಯ ಲೈಂಗಿಕ ಕ್ರಿಯೆಗಳ ವಿರುದ್ಧ ಈ ಪರಿಚ್ಛೇದವನ್ನು ಬಳಸಲಾಗಿತ್ತು. ಈ ಪರಿಚ್ಛೇದದ ಅಡಿಯಲ್ಲಿ ಭಾರತದಲ್ಲಿ ಸಲಿಂಗಕಾಮವು ಅಪರಾಧವಾಗಿದೆ. ಇದರ ಜೊತೆಗೆ ಸಾಮಾಜಿಕ ನಿಷೇಧದ ಪರಿಣಾಮವಾಗಿ ಗಂಡುಮಕ್ಕಳ ಮೇಲಿನ ಲೈಂಗಿಕ ಶೋಷಣೆಯು ಹಲವು ಬಾರಿ ವರದಿಯಾಗದೇ ಉಳಿದುಕೊಂಡಿದೆ ಮತ್ತು ನೀರವತೆ, ಲಜ್ಜತೆ ಮತ್ತು ಗೌಪ್ಯತೆಯ ಮುಸುಕಿನಲ್ಲಿ ಮರೆಯಾಗಿದೆ. ಈ ಉದ್ದೇಶಿತ ಸಮುದಾಯಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ಹೆಚ್ಚಿನ ಮಧ್ಯಪ್ರವೇಶವು ಎಚ್‌ಐವಿ/ಏಡ್ಸ್ ಅರಿವಿನ ಕುರಿತಾಗಿದೆ. ಲೈಂಗಿಕ ಶೋಷಣೆಗೊಳಗಾದ ಗಂಡುಮಕ್ಕಳನ್ನು ರಕ್ಷಿಸುವಲ್ಲಿ, ಪುನಶ್ಚೇತನಗೊಳಿಸುವಲ್ಲಿ ಮತ್ತು ಕ್ಷೇಮಾಭ್ಯುದಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಲ್ಲಿ ಸರಕಾರಿ ಅಥವಾ ನಾಗರಿಕ ಸಮಾಜದಿಂದ ಸ್ವಲ್ಪವೇ ಮಟ್ಟದ ಅಭಿವೃದ್ಧಿ ಕಾರ್ಯ ನಡೆದಿದೆ.

ಐಪಿಸಿಯ ಪ್ರಕಾರ ಕೇವಲ ಬಲಾತ್ಕಾರದ ಅತ್ಯಾಚಾರ ಮತ್ತು ಸಾಡಮಿ ಮಾತ್ರವೇ ಕ್ರಿಮಿನಲ್ ಅಪರಾಧವಾಗಬಲ್ಲುದು. ಬಲಾತ್ಕಾರದ ಅತ್ಯಾಚಾರದ ಹೊರತಾದ ಯಾವುದೇ ಲೈಂಗಿಕ ನಿಂದನೆಗಳು, ಐಪಿಸಿ ಪ್ರಕಾರ 'ಬಲಿಪಶುವಿನ ಮುಗ್ಧತೆಯ ದುರುಪಯೋಗ' ಎಂಬುದಾಗಿ ಪರಿಗಣಿಸಲಾಗುತ್ತದೆ.ಇದೂ ಪ್ರತಿ ಪರಿಚ್ಛೇದದಲ್ಲೂ ಮಕ್ಕಳ ಲೈಂಗಿಕ ಶೋಷಣೆಯ ವಿವಾದವನ್ನು ಬಗೆಹರಿಸುವುದಿಲ್ಲ. ಐಪಿಸಿಯ 376 ಪರಿಚ್ಛೇದವು ಬಲಾತ್ಕಾರದ ಅತ್ಯಾಚಾರದ ವಿರುದ್ಧ ಮಹಿಳೆಗೆ ಪರಿಹಾರವನ್ನು ನೀಡುತ್ತದೆ ನಿಜವಾಗಿ ಉಂಟಾಗುತ್ತಿರುವ ಮಕ್ಕಳ ಲೈಂಗಿಕ ಅತ್ಯಾಚಾರದ ಶ್ರೇಣಿಗೆ ಈ ಪರಿಚ್ಛೇದವನ್ನು ತುಂಬಾ ಕಡಿಮೆ ಬಳಸಿಕೊಳ್ಳಲಾಗುತ್ತದೆ.

ಈ ವಿಚಾರವನ್ನು ಮುಂದಕ್ಕೆ ಇನ್ನಷ್ಟು ಗೊಂದಲಗೊಳಿಸಲು, ಭಾರತದ ವಿವಿಧ ಶಾಸನಗಳಲ್ಲಿ ಮಗುವನ್ನು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಲಾಗುತ್ತದೆ. ಭಾರತೀಯ ಸಂವಿಧಾನದ ಮತ್ತು ಬಾಲಕಾರ್ಮಿಕ ಕಾಯಿದೆ(ರಕ್ಷಣೆ ಮತ್ತು ನಿಯಂತ್ರಣ)1986ರ ಪ್ರಕಾರ, ಮಗು ಎಂದರೆ, 14 ವರ್ಷ ಪ್ರಾಯ ಪೂರ್ಣಗೊಳಿಸದ ವ್ಯಕ್ತಿ ಎಂಬುದಾಗಿದೆ. ಬಾಲ ನ್ಯಾಯಾಲಯ(ಪೋಷಣೆ ಮತ್ತು ಸಂರಕ್ಷಣೆ)ಕಾಯಿದೆ 2000(ಜೆಜೆ ಕಾಯಿದೆ)ಪ್ರಕಾರ ಇದು 18 ವರ್ಷ ತುಂಬಿದ ಬಾಲಕ ಮತ್ತು ಬಾಲಕಿಯರಾಗಿದ್ದಾರೆ. ಅನೈತಿಕ ಸಾಗಾಣಿಕಾ (ಸಂರಕ್ಷಣಾ)ಕಾಯಿದೆ, 1956ರ ಪ್ರಕಾರ ಮಗು ಎಂದರೆ 16 ವರ್ಷ ತುಂಬಿರದ ವ್ಯಕ್ತಿ ಎಂಬುದಾಗಿದೆ.

ನ್ಯಾಯಾಂಗ ಪ್ರಕ್ರಿಯೆಯಲ್ಲಿನ ವಿಳಂಬ ಮತ್ತು ಅಪರಾಧದ ಕುರಿತಂತೆ ತನಿಖಾ ಅಧಿಕಾರಿಗಳಿಂದ ಅಪರಾಧಗಳಿಗೆ ಆಪಾದನೆ ಪಟ್ಟಿ ತಯಾರಿಕೆಯ ದೀರ್ಘಾವಧಿ ಮುಂದೂಡುವಿಕೆಯಿಂದಾಗಿ ಬಲಿಪಶುಗಳು ವೈಷಮ್ಯವನ್ನು ಹೊಂದುತ್ತಾರೆ ಮತ್ತು ಪ್ರಕರಣದ ಬಗ್ಗೆ ಆಸಕ್ತಿಯನ್ನೇ ಕಳೆದುಕೊಳ್ಳುತ್ತಾರೆ, ಅತೀ ಮುಖ್ಯವಾದ ಸಾಕ್ಷಿಗಳು ಕಾಣೆಯಾಗುವುದು, ಪ್ರಕರಣದ ಕಾಗದಗಳು ಕಳೆದುಹೋಗುವುದು, ಆಘಾತಕಾರಿ ಪರಿಣಾಮದ ಭಯದಿಂದಾಗಿ ಬಲಿಪಶುಗಳ ಕುಟುಂಬಗಳು ದೂರನ್ನು ಹಿಂದಕ್ಕೆ ಪಡೆಯುವ ಒತ್ತಡಕ್ಕೆ ಬೀಳುವುದು, ಆಪಾದನೆ ಪಟ್ಟಿ ತಯಾರಿಕೆಯಲ್ಲಿನ ಮುಂದೂಡುವಿಕೆಯಿಂದಾಗಿ ವಿಚಾರಣೆ ವಿಳಂಬವಾಗುತ್ತದೆ.

ಹೆಚ್ಚುವರಿ ಪ್ರಾದೇಶಿಕ ಕಾನೂನಿನ ಕೊರತೆಯು, ಅಪರಾಧಿಗೆ ಶಿಕ್ಷೆಯಿಂದ ತಪ್ಪಿಸಿಕೊಂಡು ದೇಶ ಅಥವಾ ರಾಜ್ಯವನ್ನು ತೊರೆಯಲು ಹಾದಿ ಮಾಡಿಕೊಡುತ್ತದೆ. ಭಾರತದ ಸೈಬರ್ ಕಾನೂನುಗಳು ದುರ್ಬಲವಾಗಿದ್ದು, ಅಂತರ್ಜಾಲದಲ್ಲಿ ಅಶ್ಲೀಲ ಪ್ರಬಲ ನಾಗರಿಕ ಸಮಾಜದ ಪ್ರಭಾವದ ಹೊರತಾಗಿಯೂ ವಿಷಯಗಳ ನಿರೂಪಣೆಯಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವವರನ್ನು ಬಂಧಿಸುವಂತಹ ಸುಧಾರಿತ ಮಾಹಿತಿ ತಂತ್ರಜ್ಞಾನ ಕಾಯಿದೆಯು ಯಾವುದೇ ಪ್ರಭಾವಿ ಕಾನೂನು ನಿಬಂಧನೆಗಳನ್ನು ಹೊಂದಿಲ್ಲ.

ಶಿಶು ಪ್ರತಿಬಂಧ ಮಸೂದೆಯ ವಿರುದ್ಧದ ಅಪರಾಧಗಳ ಕುರಿತಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದಿಂದ ೨೦೦೬ರಲ್ಲಿ ಕರಡು ನೀತಿ ಪ್ರಸ್ತಾಪಿಸಲಾಗಿದ್ದು, (ಕರಡು) ನಿರ್ದಿಷ್ಟವಾಗಿ ಮಕ್ಕಳ ಹಕ್ಕು ರಕ್ಷಣೆಯ ಬಗ್ಗೆ ಗುರಿಯನ್ನು ಹೊಂದಿದ್ದು, ಇದು ಸದ್ಯಕ್ಕೆ ನಿರ್ಮಾಣ ಹಂತದಲ್ಲಿದೆ. 'ಮಕ್ಕಳ ಅವಶ್ಯಕತೆಗಳು'ಎಂಬ ವ್ಯಾಖ್ಯಾನದೊಂದಿಗೆ ಎಲ್ಲಾ ಅಂತರಗಳನ್ನು ನಿಭಾಯಿಸಲಾಗಿದೆ ಎಂಬುದನ್ನು ಖಚಿತಪಡಿಸಲು ನಾಗರಿಕ ಸಮಾಜ ಗುಂಪುಗಳು ಮಕ್ಕಳ ವಯಸ್ಸು 18ವರ್ಷಕ್ಕಿಂತ ಕಡಿಮೆಯಿಲ್ಲ ಎಂಬುದನ್ನು ದೃಢಪಡಿಸಿಕೊಂಡು, ವಾಣಿಜ್ಯ ಲೈಂಗಿಕ ಶೋಷಣೆಯ ವ್ಯಾಖ್ಯಾನ, (ಶಿಶು ಲೈಂಗಿಕ ಪ್ರವಾಸೋದ್ಯಮ ಉದಾಹರಣೆ), ಶಿಶು ಲೈಂಗಿಕ ಅತ್ಯಾಚಾರ ಮತ್ತು ಕಾಮಪ್ರಚೋದಕ ಮತ್ತು ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಬಳಸುವಂತಹ ವಾಣಿಜ್ಯೇತರ ಸಂದರ್ಭಗಳಲ್ಲಿ ಶಿಶು ಅತ್ಯಾಚಾರ ಮತ್ತು ಶೋಷಣೆಗಳ ಬಗ್ಗೆ ಗಮನಹರಿಸಿದೆ.

**ಸವಾಲುಗಳು ಮತ್ತು ಅನಿವಾರ್ಯತೆಗಳು**

ನೀಡಲಾಗಿರುವ ಈ ವ್ಯಾಪಕವಾದ ನಿಸ್ತೇಜ ದೃಶ್ಯಣಗಳೊಂದಿಗೆ ಪ್ರವಾಸೋದ್ಯಮದಲ್ಲಿನ ವಿಸ್ತೃತವಾದ ಅತ್ಯಾಚಾರ, ಅತ್ಯಾಚಾರ ಮಾಡಲ್ಪಟ್ಟವರ ನಿರ್ಭೀತಿ, ನಿರುತ್ಸಾಹಿ ಮತ್ತು ಕಪಟ ಅಧಿಕಾರಿಗಳು, ಉದ್ಯಮದಲ್ಲಿನ ತಾತ್ಸಾರ, ದುರ್ಬಲ ಕಾನೂನು ವ್ಯವಸ್ಥೆ ಇವುಗಳೆಲ್ಲವುದರ ಮಧ್ಯೆ ಭಾರತದ ಮಕ್ಕಳಿಗೆ ಭರವಸೆಗಳೆಲ್ಲಿವೆ?

ವಿಶೇಷ ಪ್ರಾಧಾನ್ಯತೆ ಮತ್ತು ಅನಿವಾರ್ಯತೆಯ ಅರಿವಿನೊಂದಿಗೆ ವಿವಿಧ ಮಂಡಳಿಗಳು ಆವಶ್ಯಕವಾಗಿ ಕೈಗೊಳ್ಳಬೇಕಾದ ಕೆಲವು ಸಾಮಾನ್ಯ ಮತ್ತು ಕನಿಷ್ಠ ಕ್ರಮಗಳ ಬಗ್ಗೆ ಟಿಪ್ಪಣಿಯನ್ನು ಈ ಕೆಳಗೆ ನೀಡಲಾಗಿದೆ,

**ಯುಎನ್‌ಡಬ್ಲ್ಯೂಟಿಒ**

- ನೀತಿ ಮತ್ತು ಕ್ರಮಗಳ ಮಾಹಿತಿಗೆ ಸಂಬಂಧಿಸಿದಂತೆ, ವಿವಿಧ ಸ್ವರೂಪಗಳ ಉದ್ಯಮಗಳೊಂದಿಗೆ ಕೆಲಸ ಮಾಡಲು(ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ಅನೌಪಚಾರಿಕ ಕ್ಷೇತ್ರಗಳು ) ಮತ್ತು ಕೇವಲ ಬೃಹತ್ ಕೈಗಾರಿಕೆಗಳಿಗಲ್ಲ.
- ರಾಷ್ಟ್ರೀಯ ಮತ್ತು ಪ್ರಾದೇಶಿಕ ವಲಯಗಳಲ್ಲಿ ಬಹು ಪಾಲುದಾರರೊಂದಿಗೆ ವಿಸ್ತೃತ ಸಮಾಲೋಚನೆಯನ್ನು ನಡೆಸಲು. ಎನ್‌ಜಿಓದೊಂದಿಗೆ ಹಾಗೂ ವಿವಿಧ ರಾಷ್ಟ್ರಗಳ ಚೌಕಟ್ಟಿನಲ್ಲಿ ಮಕ್ಕಳ ಹಕ್ಕು ಮತ್ತು ರಕ್ಷಣೆಯ ಬಗ್ಗೆ ಕಾರ್ಯನಿರ್ವಹಿಸುತ್ತಿರುವ ತಂಡಗಳೊಂದಿಗೆ ಸಂಪರ್ಕದಲ್ಲಿರಲು ಮತ್ತು ತಿಳಿದುಕೊಳ್ಳಲು.
- ಮೂಲದಿಂದ ವಾಸ್ತವವನ್ನು ಅರ್ಥಮಾಡಿಕೊಳ್ಳಲು ಸಂಶೋಧನಾ ಅಧ್ಯಯನ ಮತ್ತು ಅಭಿವೃದ್ಧಿ ಸಂಶೋಧನೆಗಳನ್ನು ಪ್ರೋತ್ಸಾಹಿಸಿ ಬೆಂಬಲಿಸಲು.ಇದು ವ್ಯವಸ್ಥೆಗೂ ಮೀರಿ ಹೆಚ್ಚು ಪ್ರಬಲವಾಗಿ ವಿವರ ನೀಡಲು ಮತ್ತು ಕಾರ್ಯಪಡೆ ಸಭೆನಡೆಸಲು, ಯುಎನ್‌ಡಬ್ಲ್ಯೂಟಿಯ ಬದ್ಧತೆಯನ್ನು ಸೂಚಿಸುತ್ತದೆ ಮತ್ತು ಸ್ಪಷ್ಟ ಫಲಿತಾಂಶ ಮತ್ತು ತೀರ್ಮಾನಗಳ ಹೊಣೆಯನ್ನು ಹೊಂದಲು ಸಹಾಯಕವಾಗುತ್ತದೆ.

- ಮಕ್ಕಳ ಶೋಷಣೆಯ ಸಮಸ್ಯೆಗಳ ವಿವರಗಳ ಮೇಲೆ ಮತ್ತು ಮಕ್ಕಳ ಸಾಗಾಣಿಕೆ,ಅಶ್ಲೀಲ ವಿಷಯಗಳ ನಿರೂಪಣೆ, ಬಾಲಕಾರ್ಮಿಕತೆ, ಮಕ್ಕಳ ಲೈಂಗಿಕ ಶೋಷಣೆ ಮುಂತಾದವುಗಳಲ್ಲಿ ಸಹಯೋಗ ಮತ್ತು ಪಾತ್ರ ನಿರ್ವಹಣೆಯನ್ನು ಖಂಡಿಸಲು ಸ್ಪಷ್ಟವಾದ ಪ್ರವಾಸೋದ್ಯಮದ ನೀತಿ ಸಂಹಿತೆಗಳು ವಿಸ್ತಾರಗೊಳ್ಳಬೇಕು .
- ಈ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ರಾಷ್ಟ್ರೀಯ ಸರಕಾರದ ಹೊಣೆಯನ್ನು ವಿಮರ್ಷಿಸಲು ಮಾರ್ಗದರ್ಶನಗಳು. ಇದರಿಂದಾಗಿ ಇದರ ಕುರಿತಂತೆ ಸರಕಾರಗಳು, ಪ್ರವಾಸೋದ್ಯಮ ಮಂಡಳಿಗಳು, ಉದ್ಯಮ ಮತ್ತು ನಾಗರಿಕ ಸಮಾಜ ಸಂಸ್ಥೆಗಳು ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳಬಹುದು. ಈ ಮಾರ್ಗದರ್ಶಕವು ಪ್ರಬಲ ರಾಷ್ಟ್ರೀಯ ಶಾಸನದ ಅಂಶಗಳನ್ನು, ನೀತಿ ಪರಿಪಾಲನ ಮತ್ತು ವಿವಿಧ ರಾಜ್ಯ ಮಂಡಳಿಗಳ ನಡುವಿನ ಸಹಕಾರ, ಅಂತಾರಾಷ್ಟ್ರೀಯ ಸಹಕಾರ, ಧನಾತ್ಮಕ ಕ್ಷೇತ್ರಗಳ ಪಾತ್ರ ಮತ್ತು ಮುಖ್ಯ ಸೂಚಕವಾಗಿ ನಾಗರಿಕ ಸಮಾದ ಸಂಸ್ಥೆಗಳ ಸಹಭಾಗಿತ್ವ ಮುಂತಾದವುಗಳನ್ನು ಹೊಂದಿರಬೇಕು.

**ಅಂತಾರಾಷ್ಟ್ರೀಯ ಸಂಸ್ಥೆಗಳು**

- ಸಂಶೋಧನೆಯ ಬೆಂಬಲದೊಂದಿಗೆ ಮತ್ತು ಮಕ್ಕಳನ್ನು ಲೈಂಗಿಕ ಅತ್ಯಾಚಾರದಿಂದ ರಕ್ಷಿಸುವ ಸಲುವಾಗಿ ಅಂತಾರಾಷ್ಟ್ರೀಯ ನಿಯಮಾವಳಿಗಳನ್ನು ಅನುಸರಿಸುವಂತೆ ರಾಜ್ಯ ಮತ್ತು ರಾಷ್ಟ್ರೀಯ ಸರಕಾರಗಳ ಮೇಲೆ ಒತ್ತಡ ಹೇರಲು
- ಸರಕಾರವು ಅವಶ್ಯಕವಾಗಿ ಹೊಂದಿರಬೇಕು ಮತ್ತು ಪ್ರವಾಸಿಗರು ದೇಶದಿಂದ ಹೊರಹೋಗುವ ಪ್ರಕರಣವನ್ನು ನಿಭಾಯಿಸಲು ವಲಸೆ ಅಧಿಕಾರಿಗಳೊಂದಿಗೆ ಮತ್ತು ಪೊಲೀಸರೊಂದಿಗೆ ಸಹಭಾಗಿತ್ವ ತ್ವರಿತ ಮಾಹಿತಿ ವಿನಿಮಯದ ನಿಯಮಾವಳಿಗಳನ್ನು ಹೊಂದಬೇಕು.
- ನಡವಳಿಕೆಯ ನಿಯಮಾವಳಿಗಳ ಮೇಲಿನ ಕಾರ್ಯವು ಪ್ರಭಾವಶಾಲಿ ಅರಿವು ಮೂಡಿಸುವ ಸಾಧನವಾಗಿದ್ದು, ಹೆಚ್ಚಿನ ಪ್ರಮಾಣದ ಮಕ್ಕಳು ಅತ್ಯಾಚಾರಕ್ಕೊಳಗಾಗುವುದನ್ನು ತಪ್ಪಿಸುವ ಮತ್ತು ರಕ್ಷಿಸುವುದರ ಮೇಲಿನ ಇದರ ಪರಿಣಾಮವನ್ನು ವಿಮರ್ಷಿಸಬೇಕು. ವ್ಯವಸ್ಥೆಗಳು ಯಾವುದರ ಬಗ್ಗೆ ಗಮನ ಹರಿಸುತ್ತವೆ ಮತ್ತು ಹೆಚ್ಚಿನ ಕ್ರಮಗಳ ಉದ್ದೇಶವನ್ನು ಹೇಗೆ ಖಾತರಿಪಡಿಸಬಹುದು ಎಂಬುದರ ಬಗ್ಗೆ ಚರ್ಚೆ ನಡೆಯಬೇಕು. ಉದ್ಯಮವು ಸ್ವಯಂ ವ್ಯವಸ್ಥೆ ಮತ್ತು ಸ್ವಯಂ ಸುಧಾರಣೆಗೆ ಒತ್ತಾಯಿಸಿದೆ. ಇದು ಸುಮ್ಮನೆ ಕಾರ್ಯರೂಪಕ್ಕೇ ಬರಲು ಸಾಧ್ಯವಿಲ್ಲ,

***ರಾಷ್ಟ್ರೀಯ ಮತ್ತು ರಾಜ್ಯ ನಿಯಮಗಳು ಹಾಗೂ ಶಾಸನಗಳು***

- ಪ್ರಸಕ್ತ ಶಿಶು ಶೋಷಣಾ ರೀತಿಯಲ್ಲಿರುವ ಪ್ರವಾಸೋದ್ಯಮವು, ಶಿಶು ಲೈಂಗಿಕ ಶೋಷಣೆಯನ್ನು ಸಂಪೂರ್ಣವಾಗಿ ಖಂಡಿಸುತ್ತದೆ ಮತ್ತು ಭಾರತದಲ್ಲಿ ಎಲ್ಲಾ ಪ್ರವಾಸಿ ಕೇಂದ್ರಗಳು ಶಿಶು ಶೋಷಣಾ ಮುಕ್ತ ವಲಯಗಳಾಗಿ ಮಾರ್ಪಡಲು ಬದ್ಧಗೊಂಡಿರುತ್ತದೆ ಎಂಬುದನ್ನು ರಾಷ್ಟ್ರೀಯ ಮತ್ತು ರಾಜ್ಯ ಪ್ರವಾಸೋದ್ಯಮ ನೀತಿಗಳು ದೃಢಪಡಿಸುವ ಅಗತ್ಯವಿದೆ. ಅಲ್ಲದೆ ಯಶಸ್ವೀ ನಂಬಲರ್ಹವಾದ ಭಾರತೀಯ ಆಂದೋಲನಗಳೂ ಭಾರತೀಯ ಪ್ರವಾಸೋದ್ಯಮದಲ್ಲಿನ ನಂಬಲಸಾಧ್ಯವಾದ ಲಜ್ಜತೆಯ ಮೇಲೆ ಗಮನ ಹರಿಸಲು ಸಾಧ್ಯವಿದೆ.
- ಪ್ರವಾಸೋದ್ಯಮ ಸಚಿವಾಲಯವು ಆಗಾಗ ಪ್ರವಾಸೋದ್ಯಮ ಹೆಸರಿಗೆ ಧಕ್ಕೆ ಬಂದಾಗ ತೇಪೆ ಹಚ್ಚುವ ಪ್ರತಿಕ್ರಿಯೆ ಕೊಡುವುದು ಮತ್ತು ಪ್ರಚಾರ ಮತ್ತು ಬೀದಿ ಪ್ರದರ್ಶನಗಳಿಂದ ತಮ್ಮ ಪಾತ್ರವನ್ನು ಒಂದು ಪ್ರಾಮಾಣಿಕವಾದ ನಿಯಮ ರೂಪಿಸುವ ಮತ್ತು ನಿಯಂತ್ರಕ

ಸಂಸ್ಥೆಯಾಗಿ ವಿಸ್ತರಿಸಬೇಕು. ಉದ್ಯಮ, ಪ್ರವಾಸಿ ನಿರ್ವಾಹಕರು, ಪ್ರವಾಸಿ ಏಜೆಂಟ್‌ಗಳು, ಹೋಟೇಲ್ ಸ್ಥಳೀಯ ಪ್ರಾಧಿಕಾರಗಳು,ನ್ಯಾಯ ಇಲಾಖೆ, ಪೊಲೀಸ್, ಮಕ್ಕಳು ಹಕ್ಕುಗಳು ಮತ್ತು ಇತರ ನಾಗರಿಕ ಸಮಾಜ ಸಂಸ್ಥೆಗಳು ಒಳಗೊಂಡಂತೆ ಎಲ್ಲಾ ಪಾಲುದಾರರನ್ನೊಳಗೊಂಡ' ಪ್ರವಾಸೋದ್ಯಮದಲ್ಲಿ ಶಿಶು ಅತ್ಯಾಚಾರ ನಿಗ್ರಹಕ್ಕಾಗಿ ರಾಷ್ಟ್ರೀಯ ಯೋಜನಾ ವಿಧಾನ' ಮತ್ತು ಪ್ರವಾಸೋದ್ಯಮದಲ್ಲಿನ ಶಿಶು ಅತ್ಯಾಚಾರದ ವಿರುದ್ಧ ಹೋರಾಡಲು ಸಮುದಾಯಗಳನ್ನು ಸ್ಥಾಪಿಸಿ ಕಾರ್ಯಗತಗೊಳಿಸಬೇಕು. ಶಿಶು ಲೈಂಗಿಕ ಪ್ರವಾಸೋದ್ಯಮ ಮತ್ತು ಶಿಶು ಶೋಷಣೆಯು ನಮ್ಮ ದೇಶದಲ್ಲಿ ಕಾನೂನುಬಾಹಿರವಾಗಿದೆ ಎಂದು ಎಲ್ಲಾ ಪ್ರಾದೇಶಿಕ ಮತ್ತು ವಿದೇಶಿ ಪ್ರವಾಸಿಗರಿಗೆ ಮನದಟ್ಟು ಮಾಡಲು ವ್ಯಾಪಕ ಮಾಧ್ಯಮ ಆಂದೋಲನವು ನಿರ್ವಹಣೆಗೊಳ್ಳಬೇಕು.

- ಭಾರತದಲ್ಲಿ ಶಿಶು ಲೈಂಗಿಕತೆಯನ್ನು ಈಗಲೂ ಅಮುಖ್ಯ ಮತ್ತು ಅಪ್ರಧಾನ ಎಂಬುದಾಗಿ ಪರಿಗಣಿಸಲಾಗುತ್ತಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ವಿಸ್ತೃತ ಕಾಯಿದೆಯನ್ನು ಜಾರಿಗೊಳಿಸಬೇಕು ಇದರಿಂದಾಗಿ, ಶಿಶು ಅತ್ಯಾಚಾರ ಮತ್ತು ಶಿಶು ಶೋಷಣೆ(ಹೆಣ್ಣು ಮತ್ತು ಗಂಡು ಎರಡೂ) ಗಂಭೀರ ಅಪರಾಧ, ಜಾಮೀನು ರಹಿತ ಎಂಬುದಾಗಿ ಪರಿಗಣಿಸಲ್ಪಟ್ಟು, ಅಪರಾಧಿಗಳಿಗೆ ತೀವ್ರ ಮತ್ತು ಕಠಿಣ ಶಿಕ್ಷೆ ವಿಧಿಸಲಾಗುತ್ತದೆ.
- ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕ ಸ್ಪರ್ಧಿಯಾಗಿರುವ ಬಗ್ಗೆ ಭಾರತವು ಹೆಮ್ಮೆ ಪಟ್ಟುಕೊಳ್ಳುತ್ತಿರುವಾಗಲೇ, ಶಿಶು ಅತ್ಯಾಚಾರ ನಿರ್ಮೂಲನೆಗೊಳಿಸುವ ಸಾಮಾನ್ಯ ಕಾನೂನಿನ ಬಗ್ಗೆ ಕಳಪೆ ದಾಖಲೆಯನ್ನು ಹೊಂದಿದ್ದು, ಇದು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನವನ್ನು ಸುಲಭವಾಗಿಸುತ್ತದೆ. ಕಾಮಪ್ರಚೋದಕಗಳಿಗೆ ಮಕ್ಕಳನ್ನು ಸರಬರಾಜು ಮಾಡುವುದನ್ನು ಮತ್ತು ಬಳಸಿಕೊಳ್ಳುವುದಕ್ಕೆ ಜೊತೆಗೆ ಶಿಶು ಕಾಮಪ್ರಚೋದಕ ಸಾಮಾಗ್ರಿಗಳನ್ನು ಪಡೆಯುವುದಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಅಪರಾಧವೆಂದು ಪರಿಗಣಿಸಲು ಮತ್ತು ಸ್ಪಷ್ಟವಾಗಿ ವ್ಯಾಖ್ಯಾನಿಸಲು . ಮಾಹಿತಿ ತಂತ್ರಜ್ಞಾನ ಕಾಯಿದೆ(ಸುಧಾರಿತ 2008) ಯು ಆವಶ್ಯಕವಾಗಿ ಮತ್ತೊಮ್ಮೆ ತಿದ್ದುಪಡಿಗೊಳ್ಳಬೇಕಾಗಿದೆ.
- ತಪ್ಪಿತಸ್ಥ ಪ್ರವಾಸಿಗರು(ವಿದೇಶಿ ಮತ್ತು ಪ್ರಾದೇಶಿಕ) ಕಾನೂನಿನಿಂದ ನುಣುಚಿಕೊಂಡಿಲ್ಲ ಎಂಬುದನ್ನು ದೃಢಪಡಿಸಿಕೊಳ್ಳುವ ಸಲುವಾಗಿ ಸೂಕ್ತ ಕ್ರಮವನ್ನು ಪ್ರಾರಂಭಿಸಲು ಮತ್ತು ಹೆಚ್ಚುವರಿ ಪ್ರಾದೇಶಿಕ ಕಾನೂನುಗಳನ್ನು ಅಳವಡಿಸಲು ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕು.
- ಸೂಳೆಗಾರಿಕೆಯ ಮೇಲಿನ ಭಾರತೀಯ ಕಾನೂನು ಒಂದು ವಿವಾದಾತ್ಮಕ ವಿಚಾರವಾಗಿದ್ದು, ಇದರಲ್ಲಿ ನಾಗರಿಕ ಸಮಾಜದ ಚರ್ಚೆಯನ್ನೂ ಧ್ರುವೀಕರಣ ಸ್ಥಿತಿಯಲ್ಲಿ ಪರಿಗಣಿಸಲಾಗಿದೆ. ಏನೇ ಆದರೂ, ಕಾನೂನು ಮಕ್ಕಳನ್ನು ನಿರ್ಲಕ್ಷಿಸಲಾಗುವುದಿಲ್ಲ. ಯಾವ ವಿಧದ ಚಟುವಟಿಕೆಗಳು ಮತ್ತು ಸಂಭಾವನೆಗಳು ನಿಷೇಧಿತವಾಗಿದೆ ಎಂಬುದನ್ನು ಸ್ಪಷ್ಟವಾಗಿ ವಿವರಿಸಬೇಕು ಮತ್ತು ಐಚ್ಛಿಕ ಶಿಷ್ಟಾಚಾರ ಕುರಿತ ಆದೇಶದಂತೆ ಶಿಶು ವ್ಯಭಿಚಾರ ನಡೆಸುವ, ಪ್ರೋತ್ಸಾಹಿಸುವ ಮತ್ತು ಮಕ್ಕಳನ್ನು ದೊರಕಿಸಿಕೊಡುವ ಎಲ್ಲಾ ಚಟುವಟಿಕೆಗಳನ್ನು ಅಪರಾಧವಾಗಿ ಪರಿಗಣಿಸಬೇಕು.

- ಮಕ್ಕಳ ರಕ್ಷಣೆಗಾಗಿ ರಾಜ್ಯ ಆಯೋಗದಂತಹ ಯಾಂತ್ರೀಕರಣ ಮತ್ತು ವ್ಯವಸ್ಥೆಗಳನ್ನು ಆವಶ್ಯಕವಾಗಿ ರಚಿಸಬೇಕು.ಹಾಟ್‌ಲೈನ್ ಮತ್ತು ಚೈಲ್ಡ್‌ಲೈನ್ ಸೇವೆಗಳು ಇನ್ನಷ್ಟು ವೃದ್ಧಿಗೊಳ್ಳಬೇಕು ಮತ್ತು ಕರೆ ಮಾಡುವವರಿಗೆ ಅಗತ್ಯವಿರುವಂತಹ ಸೇವೆ ಮತ್ತು ನೆಟ್ವರ್ಕ್‌ಗಳನ್ನು ಇದು ಹೊಂದಿದೆ ಎಂದು ಖಚಿತಪಡಿಸಿಕೊಳ್ಳುವ ಮೂಲಕ ಅದನ್ನು ಪುನಶ್ಚೇತನಗೊಳಿಸಬೇಕು.
- ವೇಶ್ಯಾವಟಿಕೆಯಿಂದ ಮಕ್ಕಳನ್ನು ಮುಕ್ತಿಗೊಳಿಸುವುದು, ಪುನರ್ವಸತಿಗೊಳಿಸುವುದು ಮತ್ತು ಅವರ ರಕ್ಷಣೆ ಹಾಗೂ ಅವರನ್ನು ಅವರ ಮನೆಗೆ ಹಿಂತಿರುಗಿಸುವುದು ಅಥವಾ ಅವರಿಗೆ ಸುರಕ್ಷತೆ ಮತ್ತು ಗೌರವವನ್ನು ನೀಡುವಂತಹ ಯಾವುದಾದರೂ ಸ್ಥಳಕ್ಕೆ ಕಳುಹಿಸುವ ಏರ್ಪಾಟು ಮಾಡುವುದನ್ನು ಖಚಿತಪಡಿಸಿಕೊಳ್ಳಬೇಕು. ಗಂಡು ಮಕ್ಕಳ ಅಗತ್ಯತೆಗಳು ಹಲವು ಬಾರಿ ನಿರ್ಲ್ಯಕ್ಷಕ್ಕೊಳಪಡುವ ಕಾರಣ ಗಂಡು ಮಕ್ಕಳ ಅಗತ್ಯತೆಗಳ ಬಗ್ಗೆ ಹೆಚ್ಚು ಗಮನ ಹರಿಸಬೇಕು.
- ಈ ವಿಚಾರಗಳ ಕುರಿತಂತೆ ಭಾರತೀಯ ಇಲಾಖಾಧಿಕಾರಿಗಳ ನಿರ್ಲಕ್ಷ್ಯತನ ಎಲ್ಲರಿಗೂ ವಿಚಾರಶೂನ್ಯತೆಯು ಎಲ್ಲರಿಗೂ ತಿಳಿದಿದ್ದು, ಈ ಅಧಿಕಾರಿಗಳು ಶಾಶ್ವತ ನಿರಾಕರಣೆಯ ರಾಜ್ಯದಲ್ಲಿ ನೆಲೆಸಿರುವಂತೆ ಭಾಸವಾಗುತ್ತದೆ. ಶಿಶು ಕಾಮಪ್ರಚೋದಕ ಮತ್ತು ಶಿಶು ನಿಂದನೆಯ ವಿಚಾರಗಳನ್ನು ತಡೆಗಟ್ಟುವಲ್ಲಿ ಪೊಲೀಸ್, ಸರಕಾರಿ ಇಲಾಖೆಗಳು, ವಲಸೆ, ವಿಮಾನ ಪ್ರಾಧಿಕರಗಳು, ಹೋಟೇಲ್ ಮತ್ತು ಪ್ರವಾಸಿ ಉದ್ಯಮಗಳು ಮತ್ತು ಎನ್‌ಜಿಒ ಮುಂತಾದವುಗಳ ಸಾಮರ್ಥ್ಯವನ್ನು ಹೆಚ್ಚಿಸುವುದು ತುಂಬಾ ಕಷ್ಟಕರ. ಅಲ್ಲದೆ, ಬಲಿಪಶುಗಳು ಹೆಚ್ಚಾಗಿ ಬಡಕುಟುಂಬದವರಾದ ಕಾರಣ ಇದು ಅಸಂರಕ್ಷಣೀಯವಾಗಿದೆ ಮತ್ತು ಮಧ್ಯಮದ ವರ್ಗದ ಒತ್ತಡ ಅಥವಾ ಅಸಮಾಧಾನವು ತೀರಾ ಕಡಿಮೆ. ಪ್ರವಾಸಿ ಪೊಲೀಸರು ಪ್ರವಾಸಿಗರ ರಕ್ಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ ಆದರೆ, ಪ್ರವಾಸಿಗರಿಂದ ಅತ್ಯಾಚಾರಕ್ಕೊಳಪಡುವ ಮಕ್ಕಳನ್ನು ರಕ್ಷಿಸುವ ಬಗ್ಗೆ ಅವರು ಯೋಚಿಸುವುದಿಲ್ಲ!

**ಪ್ರವಾಸೋದ್ಯಮ, ಪ್ರವಾಸ ಮತ್ತು ಆತಿಥ್ಯೋದ್ಯಮ**

ಭಾರತದಲ್ಲಿ ಪ್ರವಾಸೋದ್ಯಮವು ಸಮಸ್ಯೆಗಳಿಂದ ತನ್ನನ್ನು ದೂರ ಉಳಿಸಿಕೊಂಡಿದೆ. ಕೇವಲ ಅರಿವು ನಿರ್ಮಾಣದತ್ತ ಗಮನ ಹರಿಸಿದರೆ ಸಾಕಾಗುವುದಿಲ್ಲ, ತನ್ನ ಹೊಣೆಗಾರಿಕೆಯನ್ನು ಪ್ರದರ್ಶಿಸಲು ಅದಕ್ಕಿಂತಲೂ ಹೆಚ್ಚಿನ ಶ್ರಮ ವಹಿಸಬೇಕಾಗಿದೆ. ಸಣ್ಣ, ಮಧ್ಯಮ ಮತ್ತು ಅನೌಪಚಾರಿಕ ಕ್ಷೇತ್ರಗಳಲ್ಲಿ ಹೆಚ್ಚಿನ ಶಿಶು ಅತ್ಯಾಚಾರಗಳು ಗೋಚರತೆಯಲ್ಲಿದೆ(ಇನ್ನೂ ನಿಯಂತ್ರಣಗೊಂಡಿಲ್ಲ).ಉದ್ಯಮ ಸಂಸ್ಥೆಗಳು ಕೇವಲ ತಮ್ಮ ಪ್ರದೇಶಗಳಲ್ಲಿ ಏನಾಗುತ್ತದೆ ಎಂಬ ವಿಷಯಗಳ ಬಗ್ಗೆ ಗಮನಹರಿಸಿದೆ, ಸಣ್ಣ ಮನೆಗಳಲ್ಲಿ, ಲಾಡ್ಜ್‌ಗಳಲ್ಲಿ, ಬೀಚ್‌ಗಳಲ್ಲಿ ಬೀದಿಗಳಲ್ಲಿ ಎಷ್ಟು ಶಿಶು ಅತ್ಯಾಚಾರ ನಡೆಯುತ್ತದೆ ಎಂಬುನ್ನು ಪರಿಗಣಿಸಿ ಅವುಗಳ ಬಗ್ಗೆ ಆವಶ್ಯಕವಾಗಿ ಕ್ರಮಕೈಗೊಳ್ಳಲು ಸಿದ್ಧರಿರಬೇಕು. ಪ್ರವಾಸ ಮತ್ತು ಪ್ರವಾಸೋದ್ಯಮ ಸಂಬಂಧಿ ಮಂಡಳಿಗಳು ಮತ್ತು ಸಂಸ್ಥೆಗಳು ಈ ಕ್ಷೇತ್ರಗಳತ್ತ ಗಮನಹರಿಸಬೇಕು ಮತ್ತು, 'ಇದು ನನ್ನ ವ್ಯಾಪ್ತಿಯಲ್ಲಿಲ್ಲ' ಎಂದು ಹೇಳುವ ಮೂಲಕ ಸಮಸ್ಯೆಗಳನ್ನು ನಿರ್ಲಕ್ಷಿಸಬಾರದು.

- ಒಂದು ಹಂತದ ತನಕ ಸ್ವಯಂ ಪ್ರೇರಿತ ನಿಯಮಗಳು ಮತ್ತು ಮಾರ್ಗದರ್ಶಕಗಳು ಪರಿಣಾಮಕಾರಿಯಾಗುವುದಿಲ್ಲ. ಪರಿಸರ ಉಲ್ಲಂಘನೆ ಮತ್ತು ಶಿಶು ಅತ್ಯಾಚಾರ ಮುಂತಾದ ಇತರ ಉಲ್ಲಂಘನೆಗಳಲ್ಲಿ ಕಾಣಬಹುದು. ಉದ್ಯಮವು ತನ್ನ ಕಾರ್ಪೋರೇಟ್ ಸಮಾಜ ಆಡಂಬರಕ್ಕಿಂತಲೂ ಹೆಚ್ಚಾಗಿ ಉದ್ಯಮಗಳು ಆವಶ್ಯಕವಾಗಿ ಮುಂದುವರಿಯಬೇಕಾಗಿದ್ದು, ಜವಾಬ್ದಾರಿಯನ್ನು ತೆಗೆದುಕೊಳ್ಳಲು ಮತ್ತು

ಪ್ರದರ್ಶಿಸಲು ಇಚ್ಛಿಕನಾಗಿರುವುದು, ನಾಡಿನ ಕಟ್ಟುನಿಟ್ಟಿನ ಕಾನೂನಿಗೆ ಅಧೀನನಾಗಿರಲು ಒಪ್ಪಿಕೊಂಡು ಶಿಶು ಅತ್ಯಾಚಾರ ನಿವಾರಣೆಯ ತಮ್ಮ ಬದ್ಧತೆಯ ಸಾಧನೆಗಾಗಿ ಖಂಡಿತವಾಗಿಯೂ ಕಾನೂನಿನ ಪಾಲನೆಗೆ ಒತ್ತುನೀಡಬೇಕು.

ಇನ್ನೂ ಎಷ್ಟು ಮಕ್ಕಳು ಎಲ್ಲಾ ಶಿಕ್ಷೆಗಳಿಂದ ಪಾರಾಗುವ ವಯಸ್ಕರ ವಿಲಾಸ ಮತ್ತು ಮನೋರಂಜನೆಗಾಗಿ ನಾಶವಾಗುವುದನ್ನು ನಾವು ನೋಡಬೇಕಾಗಿದೆ? ಪ್ರವಾಸೋದ್ಯಮದಲ್ಲಿ ಶಿಶು ಶೋಷಣೆಯು ಸಂಘಟಿತಗೊಂಡಿದ್ದು, ಇದೊಂದು ಗಂಭೀರ ಅಪರಾಧವಾಗಿದೆ ಮತ್ತು ಇದು ವೃದ್ಧಿಯಾಗುತ್ತಲೇ ಇದೆ. ಇದು ಬದ್ಧತೆಯ ಮತ್ತು ಪ್ರಭಾವಿ ಕ್ರಮಕ್ಕೆ ಒತ್ತಾಯಿಸುತ್ತದೆ. ಸರಕಾರಗಳು, ಅಂತಾರಾಷ್ಟ್ರೀಯ ಮಂಡಳಿಗಳು ಮತ್ತು ಪ್ರವಾಸೋದ್ಯಮಗಳು ಇದರ ತೀವ್ರತೆ ಮತ್ತು ಅಪಚಾರವನ್ನು ಗಮನದಲ್ಲಿಟ್ಟುಕೊಂಡು ಈ ಗುರಿಯನ್ನು ತಲುಪಬೇಕು. ಅಲ್ಲದೆ, ಮಕ್ಕಳ ರಕ್ಷಣೆಯಲ್ಲಿ ಧನಾತ್ಮಕ, ನಿರ್ಣಾಯಕ ಮತ್ತು ದೃಢ ಪಾತ್ರ ವಹಿಸುತ್ತದೆ ಹಾಗೂ ಪ್ರವಾಸೋದ್ಯಮವು ನೈತಿಕ, ಮಾನವೀಯ ಮತ್ತು ಶೋಷಣೆರಹಿತವಾಗಿರುತ್ತದೆ ಎಂಬ ಭರವಸೆಯನ್ನು ನೀಡಬೇಕು.

ಈ ಪ್ರಬಂಧವನ್ನು ಬರೆದವರು ಎಸ್ ವಿದ್ಯಾ ಮತ್ತು ರೋಸ್‌ಮೆರಿ ವಿಶ್ವನಾಥ್

**ಉಲ್ಲೇಖಗಳು**


- ಸಮೀಕರಣಗಳು, “ಕರಾವಳಿ ಲೈಂಗಿಕ ಪ್ರವಾಸೋದ್ಯಮ ಮತ್ತು ಲಿಂಗ”,ರಾಷ್ಟ್ರೀಯ ಮಹಿಳಾ ಆಯೋಗ,2002
- ಸಮೀಕರಣಗಳು, “ಭಾರತದಲ್ಲಿ ಶಿಶು ಲೈಂಗಿಕ ಪ್ರವಾಸೋದ್ಯಮದ ಸಾಂದರ್ಭಿಕ ವಿಶ್ಲೇಷಣೆ(ಗೋವಾ ಮತ್ತು ಕರ್ನಾಟಕ)”, 2003
- ”ಭಾರತದಲ್ಲಿ ಮಹಿಳಾ ಮತ್ತು ಮಕ್ಕಳ ಸಾಗಾಣಿಕೆ”ಕುರಿತಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, 2003ರ ವರದಿ
- ಇಸಿಪಿಎಟಿ, “ಭಾರತದಲ್ಲಿ ಮಕ್ಕಳ ವಾಣಿಜ್ಯ ಲೈಂಗಿಕ ಶೋಷಣೆಯ ವಿರುದ್ಧದ ಕ್ರಮದ ಸ್ಥಿತಿಯ ಮೇಲಿನ ವರದಿ”, 2006
- ಸಮೀಕರಣಗಳು, “ಪ್ರವಾಸೋದ್ಯಮ ಚೌಕಟ್ಟಿನಲ್ಲಿ ಮಕ್ಕಳ ಹಕ್ಕುಗಳು- ಒಂದು ಸಂಗ್ರಹ”, 2006
- ಗೋವಾದಲ್ಲಿನ ಮಕ್ಕಳ ಹಕ್ಕು “ಗೋವಾದಲ್ಲಿನ ಶಿಶು ಅತ್ಯಾಚಾರ:ಪ್ರಕರಣ ವಿಶ್ಲೇಷಣೆ” ನಿಷಿತಾ ದೇಸಾಯಿ, ಎಮಿಡಿಯೋ ಪಿನೋ, ಆಂಡ್ರಿ ಪಿಂಟೋ, 2006
- ವಿಶ್ವ ದೂರದೃಷ್ಟಿ, “ಕಾಮ, ವೈಭವ, ಪರಂಪರೆ:ನೈಋತ್ಯ ಏಶಿಯಾದಲ್ಲಿ ಪ್ರವಾಸೋದ್ಯಮದ ಬೆದರಿಕೆ ಮತ್ತು ಅವಕಾಶಗಳು”- “ಪ್ರವಾಸೋದ್ಯಮದಲ್ಲಿನ ಆಚರಣೆಗಳು ಮತ್ತು ಯುಎಐಎಪಿಯ ಕಳ್ಳ ವ್ಯಾಪಾರ ಹಾಗೂ ವಿಶ್ವ ದೂರದೃಷ್ಟಿ”-ಎ.ಪೀಟರ್ ಅವರಿಂದ ಉತ್ತಮ ವರದಿ, 2008
- ಎಚ್‌ಎಕ್ಯೂ:ಕೇಂದ್ರ ಮಕ್ಕಳ ಹಕ್ಕು ಕೇಂದ್ರ. ಇನ್ನೂ ಕೇಂದ್ರದಿಂದ ದೂರಉಳಿದ: ಭಾರತದಲ್ಲಿ ಮಕ್ಕಳ ಸ್ಥಿತಿ, 2008”. ಏನಾಕ್ಷಿ ಗಂಗೂಲಿ ತುರ್ಕಾಲ್, ಭಾರ್ತಿ ಅಲಿ ಮತ್ತು ಎಮಿಲ್ ಬಿಲ್ಡ್, 2008
- ಇಸಿಪಿಎಟಿ ಅಂತಾರಾಷ್ಟ್ರೀಯದೊಂದಿಗಿನ ಸಹಭಾಗಿತ್ವದ ಸಮೀಕರಣಗಳು, “ಅನ್‌ಹೋಲಿ ನೆಕ್ಸಸ್: ಭಾರತದಲ್ಲಿನ ಧಾರ್ಮಿಕ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಗಂಡು ಮಕ್ಕಳ ಲೈಂಗಿಕ ಶೋಷಣೆ:ಆಂಧ್ರಪ್ರದೇಶ, ಕೇರಳ ಮತ್ತು ಒರಿಸ್ಸಾ”,2008

info@equitabletourism.org,
Url: www.equitabletourism.org




[1] ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಭಾರತೀಯ ಸರಕಾರ, "ಶಿಶು ಅತ್ಯಾಚಾರ ಕುರಿತ ವರದಿ, ಭಾರತ 2007", http://wcd.nic.in/ಲ್ಲಿ ಪಡೆಯಬಹುದು.

[2] "ಭಾರತದಲ್ಲಿ ಶಿಶು ಅತ್ಯಾಚಾರದ ಕುರಿತ ಅಧ್ಯಯನ:2007", ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಭಾರತೀಯ ಸರಕಾರ ದಿಂದ ಆಯೋಜಿಸಲ್ಪಟ್ಟ ಅಧ್ಯಯನ, http://www.wcd.nic.in/childabuse.pdfನಲ್ಲಿ ಪಡೆಯಬಹುದು.

[3] ಪ್ರವಾಸೋದ್ಯಮ ಸಚಿವಾಲಯ, ಭಾರತೀಯ ಸರಕಾರ, "ಪ್ರವಾಸೋದ್ಯಮ ಅಂಕಿಅಂಶಗಳು,"http://tourism.gov.in/ನಲ್ಲಿ ಪಡೆಯಬಹುದು.

[4] ಏಳನೇ ಪಂಚವಾರ್ಷಿಕ ಯೋಜನೆ 2007-12, ಸಂಪುಟII, ಪುಟ 184, ಭಾರತೀಯ ಯೋಜನಾ ಆಯೋಗ http://planningcommission.nic.in/plans/planrel/fiveyr/11th/11_v3/11th_vol3.pdfನ್ನು ಉಲ್ಲೇಖಿಸಿ

[5] "ಭಾರತದಲ್ಲಿ ಮಹಿಳಾ ಮತ್ತು ಮಕ್ಕಳ ಸಾಗಾಣಿಕೆ" ರಾಷ್ಟ್ರೀಯ ಮಾನವ ಹಕ್ಕು ಆಯೋಗದಿಂದ ಆಯೋಜಿಸಲ್ಪಟ್ಟ ಅಧ್ಯಯನ, 2003, http://nhrc.nic.in/Documents/ReportonTrafficking.pdf.ರಲ್ಲಿ ಪಡೆಯಬಹುದು.

[6] ಟೈಮ್ಸ್ ಆಫ್ ಇಂಡಿಯಾ, "ಭಾರತದಲ್ಲಿ ಶಿಶು ಲೈಂಗಿಕ ಪ್ರವಾಸೋದ್ಯಮದ ವಿಸ್ತಾರ", ರೇಣುಕಾ ಚೌಧರಿ, ನವದೆಹಲಿ, 23 ನವೆಂಬರ್ 2007, http://timesofindia.indiatimes.com/articleshow/2565154.cmsರಲ್ಲಿ ಪಡೆಯಬಹುದಾಗಿದೆ.

[7] ಐಪಿಸಿಯ 373ನೇ ಪರಿಚ್ಛೇದ-ಸೂಳೆಗಾರಿಕೆ ಮುಂತಾದವುಗಳಿಗಾಗಿ ಅಪ್ರಾಪ್ತರನ್ನು ಖರೀದಿಸುವುದು-ಯಾರೇ ಖರೀದಿಸಲಿ, ಬಾಡಿಗೆಗೆ ಪಡೆದುಕೊಳ್ಳಲಿ ಅಥವಾ 18 ವರ್ಷಕ್ಕಿಂತ ಕೆಳಗಿನ ಮಕ್ಕಳನ್ನು ಸೂಳೆಗಾರಿಕೆ ಅಥವಾ ಬಲಾತ್ಕಾರದ ಸಂಭೋಗ ಕ್ರಿಯೆ ನಡೆಸುವ ಉದ್ದೇಶದೊಂದಿಗೆ ಅಥವಾ ಅನೈತಿಕ ಮತ್ತು

ಕಾನೂನುಬಾಹಿರ ಉದ್ದೇಶಗಳಿಗೆ ಯಾವುದೇ ವ್ಯಕ್ತಿಯ ಅಧೀನಕ್ಕೆ ಒಪ್ಪಿಸುವ ವ್ಯಕ್ತಿಗೆ ಜೈಲುಶಿಕ್ಷೆ ವಿಧಿಸಲಾಗುತ್ತದೆ ಈ ಶಿಕ್ಷೆಯು 10 ವರ್ಷಗಳವರೆಗೂ ವಿಸ್ತರಣೆಗೊಳ್ಳುವ ಸಾಧ್ಯತೆ ಇದೆ, ಅಲ್ಲದೆ ದಂಡ ತೆರಬೇಕಾಗುತ್ತದೆ.

[8] ಐಪಿಸಿ 377 ಪರಿಚ್ಛೇದದ ಅಸಹಜ ಅಪರಾಧ- ಯಾವುದೇ ವ್ಯಕ್ತಿಯೊಂದಿಗೆ, ಮಹಿಳೆಯೊಂದಿಗೆ ಅಥವಾ ಪ್ರಾಣಿಯೊಂದಿಗೆ ನಿಸರ್ಗದ ಆದೇಶದ ವಿರುದ್ಧವಾಗಿ ಸ್ವಯಂ ಲೈಂಗಿಕ ಸಂಭೋಗ ನಡೆಸುವ ಯಾರೇ ಆಗಲಿ, ಜೀವಾವಧಿ ಶಿಕ್ಷೆಗೆ ಒಳಗಾಗುತ್ತಾರೆ ಅಥವಾ ಅಲ್ಲದೆ, ಶರತ್ತಿನ ವಿವರಣೆಯೊಂದಿಗೆ, ಹತ್ತು ವರ್ಷಗಳ ವಿಸ್ತರಣೆ ಹಾಗೂ ದಂಡ ಪಾವತಿಸಬೇಕಾಗುತ್ತದೆ.

[9] ರಾಷ್ಟ್ರೀಯ ಶೈಕ್ಷಣಿಕ ನೀತಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲರಾಗಿರುವ ಗುಂಪುಗಳ ಮಹಿಳೆಯರಿಗೆ ಅಧಿಕಾರದ ಗುರಿಯೊಂದಿಗೆ, ಕೇರಳ ಸರಕಾರದ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಕೇರಳ ಮಹಿಳಾ ಸಾಮಖ್ಯ ಸಮಾಜವು 1987-1989ರಲ್ಲಿ ಪ್ರಾರಂಭಗೊಂಡಿತ್ತು..

[10] ಟಿ ಅಂತಾರಾಷ್ಟ್ರೀಯ,, ಬಾಂಗ್ಲಾದೇಶ, ಭಾರತ, ಪಾಕಿಸ್ತಾನಗಳಲ್ಲಿ ತನ್ನ ಸಹಸಂಸ್ಥೆಯ ಸಹಭಾಗಿತ್ವದೊಂದಿಗೆ "ಗಂಡುಮಕ್ಕಳ ಸೂಳೆಗಾರಿಕೆಯ ಕುರಿತಾದ ಸಾಂದರ್ಭಿಕ ಅಧ್ಯಯನ", 2006.

[11] ಭಾರತದಲ್ಲಿ ಗಂಡುಮಕ್ಕಳ ಸೂಳೆಗಾರಿಕೆಯ ಬಗ್ಗೆ ಸಾಂದರ್ಭಿಕ ವಿಶ್ಲೇಷಣೆ, ಜೂನ್ 2006, ಇಸಿಪಿಎಟಿ ಅಂತಾರಾಷ್ಟ್ರೀಯ

[12] ಕಾನೂನು ಮತ್ತು ಮಕ್ಕಳ ಕಾಳಜಿ ಮತ್ತು ರಕ್ಷಣೆಯ ಅಗತ್ಯತೆಗಳ ಬಗೆಗಿನ ಸಂಘರ್ಷದಲ್ಲಿ ಮಕ್ಕಳಿಗೆ ಸಂಬಂಧಿಸಿದ ಕಾನೂನು ಜೆಜೆ ಕಾಯಿದೆಯಾಗಿದೆ. ಬಾಲ ನ್ಯಾಯ ಕಾಯಿದೆ 1986, ಭಾರತದ ಬಾಲ ನ್ಯಾಯಕ್ಕೆ ಪ್ರಾಥಮಿಕ ಕಾನೂನು ಚೌಕಟ್ಟಾಗಿದೆ. ಬಾಲಾಪರಾಧದ ವಿರುದ್ಧ ವಿಶೇಷ ಗಮನವನ್ನು ಇದು ನೀಡುತ್ತದೆ ಮತ್ತು ಕಾಳಜಿ ಮತ್ತು ರಕ್ಷಣೆಯ ಅಗತ್ಯತೆಗಳಲ್ಲಿ ಮಕ್ಕಳಿಗೆ ವಿಶೇಷ ಚೌಕಟ್ಟನ್ನು ಒದಗಿಸುತ್ತದೆ. ಬಾಲ ನ್ಯಾಯಾಲಯದ ಚಿಂತನೆಯು ಮೊದಲ ಬಾರಿಗೆ ಭಾರತೀಯ ಸರಕಾರದ ಮಕ್ಕಳ ಕಾಯಿದೆ 1960ಯಲ್ಲಿ ಚರ್ಚೆಗೊಳಪಟ್ಟಿತು. ಬಾಲ ನ್ಯಾಯ( ಮಕ್ಕಳ ಕಾಳಜಿ ಮತ್ತು ರಕ್ಷಣೆ) ಕಾಯಿದೆ, 1986ನ್ನು ಮಕ್ಕಳ ಕಾಯಿದೆ 1960 ಆಗಿ ಪರಿವರ್ತಿಸಲಾಯಿತು.